بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ಜೂನ್ 2020, 18 ಎಹ್‌ಸಾನ್ 1399 ಹಿಜರಿ ಶಮ್‌ಸಿ,
25 ಶವ್ವಾಲ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

اِنَّ الَّذِیۡنَ یَاۡکُلُوۡنَ
اَمۡوَالَ الۡیَتٰمٰی ظُلۡمًا اِنَّمَا
یَاۡکُلُوۡنَ فِیۡ بُطُوۡنِہِمۡ نَارًا ؕ
وَسَیَصۡلَوۡنَ سَعِیۡرًا ۝

(ಅನ್ನಿಸಾಅ್:11)

ಅಂದರೆ: ಅನಾಥರ ಧನವನ್ನು ಅಕ್ರಮವಾಗಿ (ಅಪಹರಿಸಿ) ತಿನ್ನುವವರು ನಿಶ್ಚಯವಾಗಿಯೂ ತಮ್ಮ ಹೊಟ್ಟೆಗಳಲ್ಲಿ ಬೆಂಕಿಯನ್ನು ತಿಂದು ತುಂಬಿಸುತ್ತಾರೆ. ಖಂಡಿತವಾಗಿಯೂ ಅವರು ಜ್ವಲಿಸುವ ಅಗ್ನಿಯನ್ನು ಪ್ರವೇಶಿಸುವರು.

**ಅಲ್ಲಾಹನೊಡನೆ ನಿಜವಾದ ಸಂಬಂಧ, ವಾಸ್ತವದ ಸಂಪರ್ಕ ಇಟ್ಟುಕೊಳ್ಳಬಯಸುವುದಾದರೆ ಪ್ರಮಾಣಿಕತೆಯಿಂದ ನಮಾಝುಗಳನ್ನು ನಿರ್ವಹಿಸಿರಿ ಮತ್ತು ನಮಾಝಿನಲ್ಲಿ ಯಾವ ರೀತಿ ತೊಡಗಬೇಕೆಂದರೆ ನಿಮ್ಮ ಶರೀರ, ನಿಮ್ಮ ನಾಲಿಗೆ, ನಿಮ್ಮ ಆತ್ಮ ಸಮೇತ ಎಲ್ಲವು ನಿಶ್ಚಯಪೂರ್ವಕವಾಗಿ ಹಾಗೂ ಭಾವಪೂರ್ಣವಾಗಿ ಸಂಪೂರ್ಣ ರೀತಿಯಲ್ಲಿ ಸಮರ್ಪಿತವಾಗಿರಬೇಕು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಲೌಕಿಕ ಸಾಧನೆಗಳೂ ಪ್ರಾರ್ಥನೆಯ ಭಾಗವಾಗಿವೆ.**

ಕೇಳಿರಿ! **"ಉದ್‌ಊನಿ ಅಸ್ತಿಜಬ್ ಲಕುಮ್"** ಎಂಬ ಪ್ರಾರ್ಥನೆಯ ತಾತ್ಪರ್ಯ ಇದೇ ಆಗಿದೆ. ಅದಕ್ಕಾಗಿ ನಿಜವಾದ ಸಮರ್ಪಣೆ ಭಾವ ಅನಿವಾರ್ಯವಾಗಿದೆ. ಅದರಲ್ಲಿ ವಿನಯ ಮತ್ತು ನಿಜವಾದ ಕಳಕಳಿಯ ಆತ್ಮವಿಲ್ಲದಿದ್ದರೆ ಅದು ಬಾರಿ ಕಾಟಾಚಾರವಾಗಿರುತ್ತದೆ. ಯಾರಾದರೂ ಪ್ರಾರ್ಥನೆಗೋಸ್ಕರ ಲೌಕಿಕ ಸಾಧನೆಗಳ ಅವಶ್ಯಕತೆಯಿಲ್ಲ ಎಂದು ಹೇಳುವುದಾದರೆ ಅದು ಅವರ ತಪ್ಪು ಕಲ್ಪನೆಯಾಗಿದೆ. ಶರೀಅತ್ ಲೌಕಿಕ ಸಾಧನೆಗಳನ್ನು ಉಪಯೋಗಿಸಲು ನಿಷೇಧ ಹೇರಲಿಲ್ಲ. ನಿಜವಾಗಿ ಹೇಳಬೇಕಾದರೆ ಪ್ರಾರ್ಥನೆಯು ಒಂದು ಸಾಧನೆ ಅಲ್ಲವೆ? ಅಥವಾ ಸಾಧನೆಗಳು ಪ್ರಾರ್ಥನೆ ಅಗಲಾರವೆ? ಸಾಧನೆಗಳ ಹುಡುಕಾಟವು ತಾವಗಿಯೇ ಒಂದು ಪ್ರಾರ್ಥನೆಯಾಗಿದೆ ಮತ್ತು ಪ್ರಾರ್ಥನೆಯು ಸ್ವಯಂ ಸಾಧನೆಗಳ ಮಹೋನ್ನತ ಮೂಲವಾಗಿದೆ. ಮನುಷ್ಯನ ದೇಹರಚನೆ ಅವನ ಎರಡು ಕೈಗಳು, ಕಾಲುಗಳು, ಪರಸ್ಪರ ಸಹಾಯಕತೆಯ ಒಂದು ದೈವಿಕ ಮಾರ್ಗದರ್ಶನವಾಗಿದೆ. ಈ ದೃಶ್ಯ ಮಾದರಿ ರೂಪದಲ್ಲಿ ಸ್ವಯಂ ಮನುಷ್ಯನಲ್ಲಿರುವಾಗ **"ವ ತಅವನೂ ಅಲಲ್ ಬಿರ್‍ರಿ ವತ್ತಬಾ"** (ಅಲ್‌ವ ಮಾಇದ–3) ಮರ್ಮ ತಿಳಿಯದವರಾದರೆ ಎಷ್ಟೊಂದು ಆಶ್ಚರ್ಯಕರ ಮಾತಾಗಿದೆ.

ಹೌದು! ನಾನು ಹೇಳುವುದೇನೆಂದರೆ ಸಾಧನೆಗಳ ಹುಡುಕಾಟವು ಪ್ರಾರ್ಥನೆಗಳ ಮೂಲಕ ಮಾಡಿರಿ! ಪರಸ್ಪರ ಸಹಕಾರದ ಮಾದರಿ ಅಲ್ಲಾಹನು ನಿಮ್ಮ ದೇಹರಚನೆಯಲ್ಲಿಯೇ ತೋರಿಸಿಕೊಟ್ಟಾಗ ನೀವು ನಿರಾಕರಿಸುವರು ಎಂದು ನಾನು ಹೇಗೆ ಭಾವಿಸಲಿ, ಈ ಮಾತನ್ನು ಇನ್ನಷ್ಟು ಖುಲಾಸೆಗೊಳಿಸಲು, ಸ್ಪಷ್ಟಪಡಿಸಲು ಅಲ್ಲಾಹನು ಲೋಕದಲ್ಲಿ ಪ್ರವಾದಿಗಳನ್ನು ಕಳುಹಿಸುವ ಏರ್ಪಾಡು ಮಾಡಿರುತ್ತಾನೆ. ಅಲ್ಲಾಹನು ಬಯಸುವುದಾದರೆ ಪ್ರವಾದಿಗಳಿಗೆ ಯಾವ ರೀತಿಯು ಸಾಧನೆಗಳನ್ನು ಒದಗಿಸದೆ ಕರ್ಯಾ ನಿರ್ವಹಿಸಲು ಸರ್ವಸಮರ್ಥನಾಗಿದ್ದನು. ಆದರೂ ಅವರಿಗೆ ಒಂದು ಸಮಯ ಹೀಗೆ ಬರುತ್ತದೆ. ಅವರು **"ಮನ್ ಅನ್ಸಾರಿ ಇಲಲ್ಲಾಹ್"** (ಅಸ್ಸಫ್–15) ಹೇಳಲು ಉಂಟಾಗುತ್ತಾರೆ. ಅಂದರೆ ಅವರೇನು ನಿರ್ಗತಿಕ ಭಿಕ್ಷುಕರೆ? ಅಲ್ಲ. **"ಮನ್ ಅನ್ಸಾರಿ ಇಲಲ್ಲಾಹ್"** ಹೇಳುವುದು ಒಂದು ವೈಭವವಾಗಿದೆ. ಅವರು ಲೋಕಕ್ಕೆ ಸಾಧನೆಗಳ ಅಗತ್ಯವನ್ನು ತಿಳಿಸ ಬಯಸುತ್ತಾರೆ. ಅದು ಪ್ರಾರ್ಥನೆಯ ಒಂದು ಭಾಗವಾಗಿದೆ. ಅದರ ಹೊರತಾಗಿಯೂ ಅವರಿಗೆ ಅಲ್ಲಾಹನ ಪರಿಪೂರ್ಣ ವಿಶ್ವಾಸ, ಅವನ ವಾಗ್ದಾನಗಳ ಮೇಲೆ ಸಂಪೂರ್ಣ ಭರವಸೆಯಿರುತ್ತದೆ. ಅವರು ಬಲ್ಲರು– **'ಇನ್ನ ಲನನ್‌ಸುರು ರುಸುಲುನ ವಲ್ಲಝೀನ ಆಮನೂ ಫಿಲ್ ಹಯಾತಿದ್ದುನ್‌ಯಾ"** (ಅಲ್–ಮೋಮಿನ್–52) ಎಂಬುದು ಒಂದು ಅಚಲ ಹಾಗೂ ನಿಶ್ಚಿತ ವಾಗ್ದಾನವಾಗಿದೆ ಎಂದು. ನಾನು ಹೇಳುವುದೇನೆಂದರೆ ಅಲ್ಲಾಹನು ಒಬ್ಬರ ಹೃದಯದಲ್ಲಿ ಸಹಕಾರ ಭಾವನೆ ಉಂಟು ಮಾಡದಿದ್ದರೆ ನಮಗೆ ಸಹಾಯ ದೊರೆಯಲು ಹೇಗೆ ಸಾಧ್ಯವಾದೀತು.

ಎಲ್ಲಿಯವರೆಗೆ ಮನುಷ್ಯನು ಏಕದೇವನಾದ ಅಲ್ಲಾಹನ ಮೇಲೆ ಪರಿಪೂರ್ಣ ವಿಶ್ವಾಸ ಹೊಂದುವುದಿಲ್ಲವೋ, ಅವನಲ್ಲಿ ಇಸ್ಲಾಮಿನ ಕುರಿತು ಪ್ರೀತಿಯಾಗಲಿ, ಗೌರವವಾಗಲಿ ಹೊಂದಲು ಸಧ್ಯವಾಗುವುದಿಲ್ಲ. ಮತ್ತೆ ನಾನು ಸಂಬಂಧಿತ ವಿಷಯದೆಡೆ ಮರಳಿ ಹೇಳುತ್ತೇನೆ. ಅವನಿಗೆ ನಮಾಝಿನಲ್ಲಿ ಸಂತೋಷ ಹಾಗೂ ಸಂತೃಪ್ತಿ ದೊರೆಯುವುದಿಲ್ಲ. ದೊರೆಯಬಹುದಾದ ಆಧಾರವೆಂದರೆ, ಎಲ್ಲಿಯವರೆಗೆ ಕೆಟ್ಟ ಇರಾದೆಗಳನ್ನು, ಅಪವಿತ್ರ ಹಾಗೂ ದುಷ್ಟ ಯೋಜನೆಗಳನ್ನು ಕೈಬಿಡುವುದಿಲ್ಲ, ಅಹಂಕಾರ ಮತ್ತು ಜಂಭವನ್ನು ಬಿಟ್ಟು ವಿನಯ ಹಾಗೂ ನಮ್ರತೆ ಹೊಂದುವುದಿಲ್ಲ. ಅವನು ಅಲ್ಲಾಹನ ನಿಜವಾದ ದಾಸನಾಗಲು ಸಾಧ್ಯವಿಲ್ಲ ಪರಿಪೂರ್ಣ ಆರಾಧನಾ ಕ್ರಮ ಕಲಿಸುವ ಅತ್ಯುತ್ತಮ ಮಾರ್ಗದರ್ಶಕ ಹಾಗೂ ಶ್ರೇಷ್ಠ ಸರ್ವಶ್ರೇಷ್ಠ ಮಾಧ್ಯಮ ನಮಾಝ್ ಮಾತ್ರವಾಗಿದೆ.

ನಾನು ಮತ್ತೊಮ್ಮೆ ತಿಳಿಯ ಬಯಸುತ್ತೇನೆ, ಅಲ್ಲಾಹನೊಡನೆ ನಿಜವಾದ ಸಂಬಂಧ, ವಾಸ್ತವದ ಸಂಪರ್ಕ ಇಟ್ಟುಕೊಳ್ಳ ಬಯುಸುವುದಾದರೆ ಪ್ರಮಾಣಿಕತೆಯಿಂದ ನಮಾಝುಗಳನ್ನು ನಿರ್ವಹಿಸಿರಿ ಮತ್ತು ನಮಾಝಿನಲ್ಲಿ ಯಾವ ರೀತಿ ತೊಡಗಬೇಕೆಂದರೆ ನಿಮ್ಮ ಶರೀರವಲ್ಲದೆ ನಿಮ್ಮ ನಾಲಿಗೆ ಅಲ್ಲದೇ ನಿಮ್ಮ ಆತ್ಮ ಸಮೇತ ಎಲ್ಲವು ನಿಶ್ಚಯಪೂರ್ವಕವಾಗಿ ಹಾಗೂ ಭಾವಪೂರ್ಣವಾಗಿ ಸಂಪೂರ್ಣ ರೀತಿಯಲ್ಲಿ ಸಮರ್ಪಿತವಾಗಿರಬೇಕು.

**ಪ್ರವಾದಿಗಳ ಗೌರವ** ರಹಸ್ಯವೇ ಇದಾಗಿದೆ ಅಂದರೆ ಪ್ರವಾದಿಗಳು ಏಕೆ ನಿಷ್ಕಳಂಕವಾಗಿರುತ್ತಾರೆ? ಅದರ ಉತ್ತರವು ಅವರು ದೈವಿಕ ಪ್ರೇಮದಲ್ಲಿ ಸಮರ್ಪಿತವಾಗಿರುವುದೇ ಅವರ ನಿಷ್ಕಳಂಕತೆಗೆ ಕಾರಣವಾಗಿರುತ್ತದೆ. ನನಗೆ ಬಹುದೇವಾರಾಧನೆಯಲ್ಲಿ ಮುಳುಗಿರುವ ಸಮುದಾಯಗಳನ್ನು ನೋಡಿದರೆ ಅಚ್ಚರಿ ಉಂಟಾಗುತ್ತದೆ. ಉದಾಹರಣೆಗೆ ಹಿಂದೂಗಳು ವಿವಿಧ ರೀತಿಯ ವಿಗ್ರಹಪೂಜೆಗಳಲ್ಲಿ ತೊಡಗಿರುತ್ತಾರೆ. ಅವರು ಸ್ತ್ರೀ ಪುರುಷರ ಮರ್ಮಾಂಗಗಳನ್ನು ಸಹ ಪೂಜಿಸಲು ಹೇಸುವುದಿಲ್ಲ. ಹಾಗೆಯೇ ಒಂದು ಮಾನವ ಶವ ಅಂದರೆ ಏಸು ಮಸೀಹನನ್ನು ಪೂಜಿಸುತ್ತಾರೆ. ಇಂತಹ ಜನರು ವಿವಿಧ ರೂಪಗಳಲ್ಲಿ ತಮ್ಮ ಮುಕ್ತಿಯನ್ನು ಪಡೆಯ ಬಯಸುತ್ತಾರೆ. ಉದಾಹರಣೆಗೆ ಮೊದಲು ಉದಾಹರಿಸಿದ ಸಮುದಾಯ ಅಂದರೆ ಹಿಂದೂಗಳು ಗಂಗಾಸ್ನಾನ ಮತ್ತು ತೀರ್ಥಯಾತ್ರೆ ಮತ್ತು ವಿವಿಧ ಬಗೆಯ ಪಾಪ ಪರಿಹಾರಗಳ ಮೂಲಕ ಮೋಕ್ಷ ಬಯಸುತ್ತಾರೆ. ಕ್ರೈಸ್ತರು ಏಸುಮಸೀಹನ ರಕ್ತವನ್ನು ತಮ್ಮ ಪಾಪ ಪರಿಹಾರದ ಮಾರ್ಗ ಅಂದುಕೊಂಡಿದ್ದಾರೆ. ಆದರೆ ನಾನು ಹೇಳುತ್ತೇನೆ, ಎಲ್ಲಿಯವರೆಗೆ ಆತ್ಮಶುದ್ಧಿ ಹೊಂದುವುದಿಲ್ಲವೋ ಬಾಹ್ಯ ಸ್ವಚ್ಛತೆ ಹಾಗೂ

*(ಪುಟ ಸಂಖೆ 03 ರಲ್ಲಿ ಮುಂದುವರಿಸಲಾಗಿದೆ)*

**ತಮ್ಮ ಎಲ್ಲಾ ಸಾಮರ್ಥ್ಯಗಳೊಂದಿಗೆ ಕಾರ್ಯ ನಿರ್ವಹಿಸಿ ಶೈಕ್ಷಣಿಕ ಮೈದಾನದಲ್ಲಿ ಎಂತಹ ಸಾಹಸಗಳನ್ನು ಮಾಡಬೇಕೆಂದರೆ ಮುಸ್ಲಿಮರಿಂದ ಮರಳಿ ಹೋಗಿರುವಂತಹ ಗೌರವವನ್ನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ ಗುಲಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನುಯಾಯಿಗಳ ಮೂಲಕ ಮತ್ತೆ ಮರಳಿಸಬೇಕಾಗಿದೆ.**

---

**ನನ್ನ ದುಆ ಹೀಗಿದೆ ಅಲ್ಲಾಹನು ನಿಮ್ಮೆಲ್ಲರ ಲೌಕಿಕ ಜ್ಞಾನ ಹಾಗೂ ದಿವ್ಯಜ್ಞಾನದಲ್ಲಿ ಪ್ರಗತಿ ನೀಡಲಿ. ನಿಮ್ಮೆಲ್ಲರ ಬುದ್ಧಿಶಕ್ತಿಯನ್ನು ಉಜ್ವಲಗೊಳಿಸಲಿ ಮತ್ತು ನಿಮ್ಮೆಲ್ಲರನ್ನು ಜನರಿಗೆ ಉಪಯೋಗವಾಗುವವರನ್ನಾಗಿ ಮಾಡಲಿ.**

---

## ನಝೂರತ್ ತಲೀಮ್ ಖಾದಿಯಾನ್‌ರವರ ವತಿಯಿಂದ ಆಯೋಜಿಸಲಾದ ಅಹ್ಮದಿಯ ಮುಸ್ಲಿಮ್ ರಿಸರ್ಚ್ ಸ್ಕಾಲರ್ಸ ಕಾನ್‌ಫರೆನ್ಸಿಗಾಗಿ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫರ ವಿಶೇಷ ಸಂದೇಶ

Phd ಕಮ್ಮಟದಲ್ಲಿ ಭಾಗವಹಿಸುತ್ತಿರುವ ಪ್ರೀಯ ಸದಸ್ಯರೇ,

**ಅಸ್ಸಲಾಮು ಅಲೈಕುಮ್ ವ ರಹ್‌ಮತುಲ್ಲಾಹಿ ವ ಬರಕಾತಹು** السلام علیکم ورحمۃ اللہ وبرکاتہ

ನನಗೆ ಖಾದಿಯಾನಿನಲ್ಲಿ Phd ಕಮ್ಮಟ ಆಯೋಜಿಸಲಾಗುತ್ತಿದೆ ಮತ್ತು ಅದರಲ್ಲಿ ಭಾಗವಹಿಸುತ್ತಿರುವವರು Phd ಪದವಿಗಳಿಸಿದ್ದಾರೆ ಅಥವಾ ಗಳಿಸುವವರಾಗಿದ್ದಾರೆ ಎಂದು ತಿಳಿದು ಬಹಳ ಸಂತೋಷವಾಯಿತು. ಅಲ್ಲಾಹನು ಈ ಸಮಾರಂಭವನ್ನು ಯಶಸ್ವಿಗೊಳಿಸಲಿ ಮತ್ತು ಎಲ್ಲಾ ರೀತಿಯಲ್ಲೂ ಅನುಗ್ರಹದಾಯಕವಾಗಿಸಲಿ ಆಮೀನ್.

ಈ ಸುವರ್ಣ ಸಂದರ್ಭದಲ್ಲಿ ಸಂದೇಶ ಕಳುಹಿಸಲು ನನ್ನಲ್ಲಿ ವಿನಂತಿಸಿಕೊಳ್ಳಲಾಗಿದೆ. ನನ್ನ ದುಆ ಹೀಗಿದೆ ಅಲ್ಲಾಹನು ನಿಮ್ಮೆಲ್ಲರ ಲೌಕಿಕ ಜ್ಞಾನ ಹಾಗೂ ದಿವ್ಯಜ್ಞಾನದಲ್ಲಿ ಪ್ರಗತಿ ನೀಡಲಿ. ನಿಮ್ಮೆಲ್ಲರ ಬುದ್ಧಿಶಕ್ತಿಯನ್ನು ಉಜ್ವಲಗೊಳಿಸಲಿ ಮತ್ತು ನಿಮ್ಮೆಲ್ಲರನ್ನು ಜನರಿಗೆ ಉಪಯೋಗವಾಗುವವರನ್ನಾಗಿ ಮಾಡಲಿ. ಆಮೀನ್.

ಇದು ಅಲ್ಲಾಹನ ಬಹು ದೊಡ್ಡ ಅನುಗ್ರಹವಾಗಿದೆ. ಅಲ್ಲಾಹನು ನಿಮ್ಮೆಲ್ಲರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರನ್ನು ಸ್ವೀಕರಿಸಲು ಸೌಭಾಗ್ಯ ನೀಡಿದನು. ಅವರನ್ನು ಅಲ್ಲಾಹನು ಜಮಾಅತ್ತಿನ ಪ್ರಗತಿ ಹಾಗೂ ಅವರ ಅನುಯಾಯಿಯವರ ಲೌಕಿಕ ಹಾಗೂ ಆಧ್ಯಾತ್ಮಿಕ ಜ್ಞಾನದಲ್ಲಿ ಉನ್ನತ ಮಟ್ಟಗಳಿಸುವವರು ಎಂಬ ಮಾಹಾನ್ ಸುವಾರ್ತೆ ನೀಡಿದ್ದನು. ಹೀಗಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅಲ್ಲಾಹನು ನನಗೆ ಪದೇ ಪದೇ ತಿಳಿಸುವುದೇನೆಂದರೆ ಆತನು ನನಗೆ ಶ್ರೇಷ್ಠತೆ ನೀಡುವನು ಹಾಗೂ ಮನಸ್ಸಿನಲ್ಲಿ ಪ್ರೀತಿ ಇರಿಸುವನು. ನನ್ನ ಜಮಾಅತ್ತನ್ನು ಭೂಮಿಯ ಕೊನೆಯವರೆಗೆ ಹರಡಿಸುವನು ಮತ್ತು ಎಲ್ಲಾ ಪಂಗಡಗಳ ಮೇಲೆ ನನ್ನ ಪಂಗಡವನ್ನು ಜಯಶಾಲಿಗೊಳಿಸುವನು. ಮತ್ತು ನನ್ನ ಪಂಗಡದ ಸದಸ್ಯರು ವಿದ್ಯೆ ಹಾಗೂ ದೈವಜ್ಞಾನದಲ್ಲಿ ಎಷ್ಟರ ಮಟ್ಟಿಗೆ ಉತ್ಕೃಷ್ಟತೆ ಹೊಂದುವರು ಎಂದರೆ ಅವರೆಲ್ಲರು ತಮ್ಮ ಸತ್ಯತೆಯ ಕಿರಣದಿಂದ, ತಮ್ಮ ಸಾಕ್ಷ್ಯಾಧಾರ ಹಾಗೂ ಕುರುಹುಗಳಿಂದ ಎಲ್ಲರ ಬಾಯಿಮುಚ್ಚಿಸುವರು."

(ತಜಲ್ಲಿಯಾತೆ ಇಲಾಹಿಯ, ರೂಹಾನ ಖಝಾಯೀನ್, ಸಂಪುಟ–20, ಪುಟ–409)

ಪ್ರತಿಯೊಬ್ಬ ಅಹ್ಮದಿಯರ ಹೊಣೆ ಏನಾಗಿದೆ ಎಂದರೆ: ಆತನು ವಿದ್ಯೆ ಹಾಗೂ ದೈವಜ್ಞಾನದಲ್ಲಿ ಉತ್ಕೃಷ್ಟ ಸ್ಥಾನಗಳಿಸುವುದಕ್ಕೆ ಪ್ರಯತ್ನಿಸಬೇಕು. ಹೀಗೆ ಅವರೆಲ್ಲರು ಗಳಿಸಿದರೆ ಅವರೆಲ್ಲರು ದೈವ ಸುವಾರ್ತೆಗಳನ್ನು ಗಳಿಸುವವರಾಗಬಹುದು. ನಿಸ್ಸಂದೇಹವಾಗಿಯು ತಾವೆಲ್ಲರು ಉನ್ನತ ಶಿಕ್ಷಣದೊಂದಿಗೆ ಸಜ್ಜುಗೊಂಡಿದ್ದೀರಿ ಅಥವಾ ಉನ್ನತ ಶಿಕ್ಷಣ ಪಡೆಯುತ್ತಿದ್ದೀರಿ. ಆದರೆ ನೆನಪಿಡಿ!! ವಿದ್ಯೆಗೆ ಕೊನೆ ಇಲ್ಲ ಮತ್ತು ಪ್ರಗತಿಯ ಪ್ರವಾಸವು ಮುಕ್ತಾಯವಾಗುವುದಿಲ್ಲ. ಮನುಷ್ಯ ತನ್ನ ಇಡೀ ಜೀವಮಾನದಲ್ಲಿ ವಿದ್ಯೆ ಕಲಿಯುತ್ತಾ ಇರುತ್ತಾನೆ. ಆದ್ದರಿಂದ ತಾವೆಲ್ಲರೂ ಸಹ ತಮ್ಮ ವಿದ್ಯೆಯನ್ನು ಸತತವಾಗಿ ಪ್ರಯತ್ನಿಸಿ ಅದನ್ನು ಬೆಳೆಸುತ್ತಾ ಇರಿ ಮತ್ತು ಅಲ್ಲಾಹನಿಂದ ವಿದ್ಯೆಯಲ್ಲಿ ಮುಂದಾಗಲು ದುಆ ಮಾಡುತ್ತಾ ಇರಿ. ಹಝ್ರತ್ ಮುಸ್ಲಿಹ್ ಮೌಊದ್(ರ) ಒಮ್ಮೆ ಹೇಳಿದರು: ರೈಲಿನಲ್ಲಿ ಅಥವಾ ಹಡಗಿನಲ್ಲಿ ಕುಳಿತಿರುವಾಗ ನನ್ನ ಮನಸ್ಸು ಆಶಿಸುವುದೇನೆಂದರೆ ಈ ವಸ್ತುಗಳನ್ನು ಅಹ್ಮದಿಯರು ನಿರ್ಮಿಸಿರಬೇಕಾಗಿತ್ತು ಅಥವಾ ಇದರ ಕಾರ್ಖಾನೆಗಳು ಅಹ್ಮದಿಯರದಾಗಿರ ಬೇಕಾಗಿತ್ತು. (ತಾರೀಖೆ ಅಹ್ಮದಿಯ್ಯತ್, ಸಂಪುಟ–17, ಪುಟ–101)

ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಈ ಭಾವನೆಗಳನ್ನು ಸಹ ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು ಮತ್ತು ತಮ್ಮ ಎಲ್ಲಾ ಸಾಮರ್ಥ್ಯಗಳೊಂದಿಗೆ ಕಾರ್ಯ ನಿರ್ವಹಿಸಿ ಶೈಕ್ಷಣಿಕ ಮೈದಾನದಲ್ಲಿ ಎಂತಹ ಸಾಹಸಗಳನ್ನು ಮಾಡಬೇಕೆಂದರೆ ಮುಸ್ಲಿಮರಿಂದ ಮರಳಿ ಹೋಗಿರುವಂತಹ ಗೌರವವನ್ನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ ಗುಲಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನುಯಾಯಿಗಳ ಮೂಲಕ ಮತ್ತೆ ಮರಳಿಸಬೇಕಾಗಿದೆ.

ಅಲ್ಲಾಹನು ತಮ್ಮೆಲ್ಲರಿಗೂ ಇದನ್ನು ಗಳಿಸುವ ಸೌಭಾಗ್ಯ ನೀಡಲಿ. ನಿಮ್ಮೆಲ್ಲರನ್ನು ಪ್ರತಿಯೊಂದು ಹೆಜ್ಜೆಯಲ್ಲೂ ಸಮರ್ಥಿಸಲಿ. ಮತ್ತು ನಿಮ್ಮೆಲ್ಲರನ್ನು ಎಂತಹ ಕಾರ್ಯಗಳನ್ನು ಕೈಗೊಳ್ಳಲು ಅನುಗ್ರಹಿಸಲಿ ಎಂದರೆ ನಿಮ್ಮಿಂದ ಅಲ್ಲಾಹನ ಸೃಷ್ಠಿಯ ಸೇವೆಯಾಗಬೇಕು. ಅಲ್ಲಾಹನು ನಿಮ್ಮೊಂದಿಗಿರಲಿ ಮತ್ತು ನಿಮ್ಮೆಲ್ಲರನ್ನು ಅಹ್ಮದಿ ಆಕಾಶದಲ್ಲಿ ಉಜ್ವಲ ತಾರೆಯಾಗುವಂತಾಗಿಸಲಿ. ಆಮೀನ್.

ವಸ್ಸಲಾಮ್
ಮಿರ್ಝಾ ಮಸ್‌ರೂರ್ ಅಹ್ಮದ್
**ಖಲೀಫತುಲ್ ಮಸೀಹ್ ಖಾಮಿಸ್**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಾಮಮಾತ್ರದ ವಿಶ್ವಾಸಗಳು ಯಾವ ನೆಮ್ಮದಿ ಅಥವಾ ಸಂತೃಪ್ತಿ ಪಡೆಯಲು ಸಾಧ್ಯವಾಗುವುದಿಲ್ಲ. ಅಂತರಂಗ ಶುದ್ಧತೆ ಮತ್ತು ಆಧ್ಯಾತ್ಮಿಕ ಉನ್ನತಿ ಇಲ್ಲದೆ ಮನುಷ್ಯನಿಗೆ ಮೋಕ್ಷ ದೊರೆಯಲಾಗದು. ಹೌದು ಆದ್ದರಿಂದ ಒಂದು ಪಾಠ ನಾವು ಕಲಿಯಬಹುದಾಗಿದೆ ಯಾವ ರೀತಿ ಒಂದು ದೇಹದ ಅಪವಿತ್ರತೆ ಸ್ವಚ್ಛತೆ ಇಲ್ಲದೆ ದೂರವಾಘುವುದಿಲ್ಲವೋ ಮತ್ತು ಶರೀರಜ್ಜೆ ಉಂಟಾಗಬಹುದಾದ ರೋಗಗಳಿಂದ ತೊಡೆಯುವುದಿಲ್ಲವೋ ಅದೇ ರೀತಿ ಆಧ್ಯಾತ್ಮಿಕ ಕುಂದುಕೊರತೆಗಳು ಮತ್ತು ಅಪವಿತ್ರತರಯ ವಿವಿಧ ಬಣ್ಣಗಳು ಸೇರಿಕೊಳ್ಳುವಾಗ ಅದನ್ನು ತೌಬ(ಕ್ಷಮೆಯಾಚನೆ) ಎಂಬ ಶುದ್ಧ ನೀರಿನಿಂದ ತೊಡೆದುಹಾಕದು ದೂರವಾಗದು. ದೈಹಿಕ ಶುದ್ಧತೆ ಇರುವ ಕ್ರಮರೀತಿಯಲ್ಲಯೇ ಆತ್ಮಶುದ್ಧಿಗೂ ಅದೇ ರೀತಿಯ ಒಂದು ಕ್ರಮವಿದೆ. ಆ ಬಗ್ಗೆ ಯೋಚಿಸುವ ಚಿಂತಿಸುವ ಜನರು ಧನ್ಯವಾಗಿದ್ದಾರೆ. **(ಮಲ್‌ಘೂಝಾತ್ ಸಂಪುಟ–1, ಪುಟ–146–149, ಮುದ್ರಣ ಖಾದಿಯಾನ್ 2018)**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಬೀರುತ್ತಿರುವ ಪರಿಣಾಮಗಳ ಕುರಿತು ಚರ್ಚಿಸಲಾಗುತ್ತದೆ. ಆ ಚರ್ಚೆಯ ಬಹುಭಾಗ ಮುಸ್ಲಿಮರ ಕುರಿತಾಗಿರುತ್ತದೆ. ಕೆಲ ಸರಕಾರಗಳು ಮಾತ್ರವಲ್ಲ ಪ್ರಜೆಗಳೂ ಸಹ ಸಾಂಸ್ಕೃತಿಕ ಘರ್ಷಣೆಯ ಕುರಿತು ಭಯಭೀತರಾಗಿದ್ದಾರೆ. ಅವರ ಭಾವನೆಯಲ್ಲಿ ಮುಸ್ಲಿಮರು ಪಾಶ್ಚಿಮಾತ್ಯರ ಸಂಸ್ಕೃತಿಗೆ ಹೊಂದಿಕೊಳ್ಳುವ ಗುಣ ಹೊಂದಿರುವುದಿಲ್ಲ. ಹಾಗಾಗಿ ಅವರು ಸಮಾಜಕ್ಕೆ ಕಂಟಕವಾಗಬಹುದು ಎಂದು ಭಾವಿಸುತ್ತಾರೆ.

ಈ ಸಮಸ್ಯೆಯ ಕುರಿತು ಮಾತನಾಡುವ ಮೊದಲು "ಸಂಸ್ಕೃತಿ" ಎಂದರೇನು ಎಂಬ ವಿಷಯದ ಕುರಿತು ವಿಶ್ಲೇಷಣೆಯ ಅಗತ್ಯವಿದೆ. ಇದರ ಬಗ್ಗೆ ಅಹ್ಮದಿಯಾ ಜಮಾಅತ್ತಿನ ದ್ವಿತೀಯ ಖಲೀಫರ ಹೇಳಿಕೆಯ ಕುರಿತು ನಾನು ಸಮ್ಮತಿ ಹೊಂದಿರುವೆನು. ಅದು ಹೀಗಿದೆ. ಅವರ ಪ್ರಕಾರ ಸಂಸ್ಕೃತಿ ಅಂದರೆ ಸಮಾಜದ ಪೂರ್ಣ ಪ್ರಮಾಣದ ಪ್ರಗತಿ. ಸಾರಿಗೆ, ಮಾಧ್ಯಮ ಚಟುವಟಿಕೆಗಳು, ಶೈಕ್ಷಣಿಕ ಪ್ರಗತಿ ಇವು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಬಲಾಢ್ಯ ಶಕ್ತಿ ಅಥವಾ ಕಾನೂನು ಅಥವಾ ಯಾವುದೇ ಮಾಧ್ಯಮಗಳ ಮೂಲಕ ಶಾಂತಿಗೋಸ್ಕರ ಮಾಡಲಾಗುವ ಪ್ರಯತ್ನಗಳು ಸಾಂಸ್ಕೃತಿಕ ಪ್ರಗತಿಯ ಮಟ್ಟವನ್ನು ಸೂಚಿಸುತ್ತದೆ. ದೇಶಗಳ ಸಭ್ಯತೆ ಅವರ ಸಂಸ್ಕೃತಿ ಅಲ್ಲಿಯ ಜನರ ದೃಷ್ಟಿಕೋನ ಸಾಮಾಜಿಕ ಸಮಸ್ಯೆಗಳ ಕುರಿತು ವರ್ತಿಸುವ ರೀತಿ ಮತ್ತು ಅವರ ನಡವಳಿಕೆಯ ಮೇಲೆ ನಿರ್ಧರಿತವಾಗುತ್ತದೆ. ಸಂಸ್ಕೃತಿಯ ನಿರ್ಧಾರ ಭೌತಿಕ ಪ್ರಗತಿಯ ಬದಲಿಗೆ ಆ ಜನರ ನೈತಿಕ, ಧಾರ್ಮಿಕ ಮತ್ತು ಅವರ ರೀತಿ ರಿವಾಜುಗಳನ್ನು ಅವಲಂಭಿಸಿರುತ್ತದೆ.

ಆದುದರಿಂದ ಸಂಸ್ಕೃತಿ – ಟೆಕ್ನಾಲಜಿ ಮತ್ತು ಶೈಕ್ಷಣಿಕ ಪ್ರಗತಿಯ ಹೆಸರಾಗಿದೆ. ಅಲ್ಲಿ ಧಾರ್ಮಿಕ ಸಂಸ್ಕೃತಿ ನೈತಿಕ ಚಿಂತನೆಗೆ ಒಳಗೊಂಡಿರುತ್ತದೆ. ಸಭ್ಯತೆ ಮತ್ತು ಸಂಸ್ಕೃತಿಯನ್ನು ಕ್ರೈಸ್ತರ ಪ್ರಾಥಮಿಕ ಇತಿಹಾಸದಿಂದ ನಾವು ಗ್ರಹಿಸಬಹುದಾಗಿದೆ. ಆ ಕಾಲದಲ್ಲಿ ರೋಂ ಆಡಳಿತವು ಉತ್ತುಂಗದಲ್ಲಿತ್ತು. ಅಲ್ಲದೇ ಇಂದು ಸಹ ಆ ಸಂಸ್ಕೃತಿ ಲೋಕದ ಶ್ರೇಷ್ಠ ಸಂಸ್ಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಡುತ್ತದೆ. ತನ್ನ ಭೌತಿಕ ಪ್ರಗತಿ ನಾಗರಿಕ ಸವಲತ್ತುಗಳು ಮತ್ತು ಸರಕಾರದ ಕಾರ್ಯ ವೈಖರಿಯ ನೆಲೆಯಲ್ಲಿ ರೋಂ ಆಡಳಿತವನ್ನು ಅತ್ಯಂತ ಸುಸಂಸ್ಕೃತ ಹಾಗೂ ವಿದ್ಯಾಸಂಪನ್ನವೆಂದು ಒಪ್ಪಲಾಗುತ್ತದೆ.

ಆದರೂ ಸಹ ಬಹಿರಂಗದಲ್ಲಿ ಕಾಣುವ ಉತ್ತಮ ಸಂಸ್ಕೃತಿ ನೈತಿಕ ಮಟ್ಟಕ್ಕೆ ಸರಿಹೋಗುತ್ತಿರಲಿಲ್ಲ. ಏಕೆಂದರೆ ಕ್ರೈಸ್ತರು ಪ್ರಾಥಮಿಕ ಕಾಲದಲ್ಲಿ ಆ ನಾಗರಿಕರಲ್ಲಿ ಪ್ರಗತಿ ಹೊಂದುವ ಹಂಬಲ ಜನ್ಮ ತಾಳಿತು. ಕ್ರೈಸ್ತ ಧರ್ಮವು ಅವರಿಗೆ ತತ್ವಗಳ ಮೇಲೆ ಮಾರ್ಗದರ್ಶನ ನೀಡುವುದಾದರೆ ರೋಮನ್ ಆಡಳಿತಗಾರರು ಅವರಿಗೆ ಲೌಖಿಕ ಕಾಯಿದೆ ಕಾನೂನುಗಳ ಕಡೆ ಲಕ್ಷ್ಯ ಸೆಳೆಯುತ್ತಿದ್ದರು.

ಹೀಗೆ ರೋಮನ್ನರ ಲೌಖಿಕ ಪ್ರಗತಿ ಸಾಧನೆಗಳು ಅವರ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಅದರ ಬದಲಿಗೆ ಕ್ರೈಸ್ತ ಧರ್ಮವು ಅವರಿಗೆ ಒಂದು ಉತ್ತಮ ಸಭ್ಯತೆ ನೀಡುವ ಬದಲು ಆ ರೋಮನ್ ಆಡಳಿತದ ಪ್ರಭುತ್ವಕ್ಕೆ ಒಳಗಾಯಿತು. ಅದರ ಪರಿಣಾಮವಾಗಿ ಇಂದು ಅದು ಧರ್ಮದಿಂದ ದೂರವಾಗಿ ಪಾಶ್ಚಿಮಾತ್ಯ ಸಮಾಜದ ಅಂಗವಾಗಿದೆ.

ಈಗ ವಲಸೆಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ನೋಡಿದರೆ ಕೆಲವು ಪಾಶ್ಚಿಮಾತ್ಯ ದೇಶಗಳ ಸಾಮಾಜಿಕ ಅಂಕಿ ಸಂಖ್ಯೆಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಹಲವು ದೇಶಗಳಿಂದ ವಲಸಿಗರು ತಮ್ಮ ದೇಶ ಬಿಟ್ಟು ಇಲ್ಲಿ ಬಂದಿರುತ್ತಾರೆ. ಅವರ ನಿಜವಾದ ಭಯಭೀತಿಗೆ ಕಾರಣಕರ್ತರು ಮುಸ್ಲಿಮರು. ಯಾಕೆಂದರೆ ಅವರು ಇಲ್ಲಿ ಬಂದು ಸೇರಿದ್ದಾರೆ. ಅದರಿಂದ ಅವರನ್ನು ದೂಷಿತರೆಂದು ಭಾವಿಸಲಾಗುತ್ತದೆ.

ನಾನು ಹೇಳಿದಂತೆ ಸಂಸ್ಕೃತಿ ಎಂದರೆ ಭೌತಿಕ ಪ್ರಗತಿ ಎಂದು ಭಾವಿಸುತ್ತೇವೆ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ವಿರೋಧಿಸುವುದು, ಅಥವಾ ಅದನ್ನು ರದ್ದುಗೊಳಿಸುವುದು ಇವೆಲ್ಲವನ್ನು ಅಭೀವೃದ್ಧಿಶೀಲ ದೇಶಗಳು ಈ ಸಂಸ್ಕೃತಿಯನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ ಪಾಶ್ಚಿಮಾತ್ಯ ಸಂಸ್ಕೃತಿಯು ಸಂಕಷ್ಟದಲ್ಲಿ ಸಿಲುಕುವುದು ದೂರದ ವಿಷಯವಾಗಿದೆ, ವಾಸ್ತವವು ಅದರ ತದ್ವಿರುದ್ಧವಾಗಿದೆ.

ಪ್ರವಾಸ ಹಾಗೂ ತಲುಪುವ ಮಾಧ್ಯಮಗಳು ಲೋಕವನ್ನು ಒಂದು ಗ್ರಾಮವನ್ನಾಗಿ ಪರಿವರ್ತಿಸಿದರು. ದೂರದರ್ಶನ ಇತರ ಸಂಪರ್ಕ ಸಾಧನಗಳು ವಿಶೇಷವಾಗಿ ಇಂಟರ್ ನೆಟ್ ಉಪಸ್ಥಿತಿಯಿಂದ ಯಾವುದೇ ಮಾತು ಈಗ ರಹಸ್ಯವಾಗಿ ಉಳಿಯುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ವಾಸಿಸುವವರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯ ಪ್ರಗತಿಯನ್ನು ಕಂಡು ತಾವು ಸಹ ಅದೇ ರೀತಿಯ ಪ್ರಗತಿ ಹೊಂದಬೇಕೆಂದು ಬಯಸುವವರಾಗಿದ್ದಾರೆ.

ಆದುದರಿಂದ ಪಾಶ್ಚಿಮಾತ್ಯ ಅಥವಾ ಐರೋಪ್ಯ ಸಂಸ್ಕೃತಿಯು ಮುಸಲ್ಮಾನರ ಉಪಸ್ಥಿತಿಯಿಂದ ಅಪಾಯದಲ್ಲಿದೆ ಎಂಬುದು ಅರ್ಥವಿಲ್ಲದ ಮಾತಾಗಿದೆ. ಬದಲಾಗಿ ಪಾಶ್ಚಿಮಾತ್ಯ ಸಂಸ್ಕೃತಿಯು ಮುಸ್ಲಿಮ್ ಲೋಕ ಒಳಗೊಂಡು ಎಲ್ಲಾ ವಿಭಾಗಗಳ ಮೇಲೆ ಪ್ರಭಾವ ಬೀರುತ್ತಿದೆ. ಇಸ್ಲಾಮ್ ಧರ್ಮ ಹರಡುವುದರಿಂದ ಯೂರೊಪಿನ ಧಾರ್ಮಿಕ ಮತ್ತು ನೈತಿಕ ಸಂಸ್ಕೃತಿಗೆ ಅಪಾಯವಾಗಿದೆ ಎಂಬುದು ಅವಲೋಕನ ಮಾಡುವಾಗ ನಿಮ್ಮ ಅಭಿಪ್ರಾಯ ಸಹಜವಾಗಿದೆ. ಅದಕ್ಕಾಗಿ ನಾನು ಈ ವಿಷಯವಾಗಿ ಮಾತನಾಡುತಿದ್ದೇನೆ.

ಒಂದು ನಿರಾಕರಿಸಲಾಗದಂತಹ ವಾಸ್ತವವೇನೆಂದರೆ ಜನರು ಧರ್ಮದಿಂದ ದೂರವಾಗುತ್ತಿದ್ದಾರೆ. ಪಾಶ್ಚಿಮಾತ್ಯರಲ್ಲಂತೂ ಇದು ಇನ್ನೂ ಹೆಚ್ಚಾಗಿ ಕಂಡು ಬರುತ್ತದೆ. ಇಲ್ಲಿಯ ಜನಸಂಖ್ಯೆಯ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಧರ್ಮ ಅಥವಾ ಅಲ್ಲಾಹನ ಕಡೆ ವಿಶ್ವಾಸವಿರುವ ಜನರ ಸಂಖ್ಯೆ ಕ್ಷೀಣಿಸುತ್ತಾ ಹೋಗುತ್ತಿದೆ. ನನ್ನ ದೃಷ್ಟಿಯಲ್ಲಿ ನಾಸ್ತಿಕತೆಯು ಪಾಶ್ಚಿಮಾತ್ಯ ಸಂಸ್ಕೃತಿಗೆ ಇಸ್ಲಾಮಿಗಿಂತಲೂ ಹೆಚ್ಚು ಅಪಾಯಕಾರಿಯಾಗಿದೆ. ಪಾಶ್ಚಿಮಾತ್ಯ ಮೌಲ್ಯಗಳು ಬಹು ಪುರಾತನವಾಗಿದೆ. ಅದರ ಅಡಿಪಾಯವು ಧಾರ್ಮಿಕ ತತ್ವಗಳನ್ನು ವಿಶೇಷವಾಗಿ ಕ್ರೈಸ್ತರ ಮತ್ತು ಯಹೂದ್ಯರ ತತ್ವಗಳನ್ನು ಬಳುವಳಿಕೆಯಾಗಿ ಪಡೆದಿದೆ. ಈ ಮೌಲ್ಯಗಳು ಮತ್ತು ಸಂಸ್ಕೃತಿಗಳು ಧರ್ಮಕ್ಕೆ ವಿರುದ್ಧವಾಗಿ ಜನರಿಗೆ ಸವಾಲಾಗಿ ಪರಿಣಮಿಸಿದೆ.

ಧಾರ್ಮಿಕ ನೇತಾನೆಂಬ ನೆಲೆಯಲ್ಲಿ ನನ್ನ ಸಲಹೆಯೇನೆಂದರೆ ತಾವುಗಳು ತಮ್ಮ ಸಂಸ್ಕೃತಿ ಮತ್ತು ವಂಶೀಯ ಸುರಕ್ಷತೆಗಾಗಿ ತಮ್ಮ ಶಕ್ತಿ ಮತ್ತು ಪ್ರಯತ್ನಗಳನ್ನು ಮಾಡಿ ಧಾರ್ಮಿಕ ಅವನತಿಯನ್ನು ತಡೆದು ಜನರನ್ನು ಧರ್ಮದೆಡೆಗೆ ಮರಳಿಸುವ ಉದ್ದೇಶ ಹೊಂದಬೇಕಾಗಿದೆ. ಹಾಗಾಗಿ, ಕ್ರೈಸ್ತ ಧರ್ಮದಿಂದಾಗಲೀ ಅಥವಾ ಯಹೂದ್ಯ ಧರ್ಮದಿಂದಾಗಲೀ ಭೌತಿಕ ಪ್ರಗತಿಯ ಹೆಸರಿನಲ್ಲಿ ನೈತಿಕ ಮಟ್ಟ ಮತ್ತು ಮೌಲ್ಯಗಳನ್ನು ತೊರೆದು, ಶತಮಾನಗಳಿಂದ ಈ ಸಮಾಜದ ಅವಿಭಾಜ್ಯ ಅಂಗವಾಗಿ ಬಂದ ಈ ಸಂಸ್ಕೃತಿಯನ್ನು ತೊರೆಯುವುದು ಹಿತವಲ್ಲ. ನನ್ನ ದೃಷ್ಟಿಯಲ್ಲಿ ಧಾರ್ಮಿಕ ಅವನತಿಯೇ ಜನರು ಇಸ್ಲಾಮ್ ಧರ್ಮದೊಂದಿಗೆ ಭಯಪಡಲು ಕಾರಣವಾಗಿದೆ. ಏಕೆಂದರೆ ಸಾಮಾನ್ಯವಾಗಿ ಮುಸ್ಲಿಮರು ತಮ್ಮ ಧರ್ಮವನ್ನು ಪಾಲಿಸುವವರಾಗಿರುತ್ತಾರೆ ಎಂಬ ವಿಷಯವನ್ನು ಅವರು ತಿಳಿದವರಾಗಿದ್ದಾರೆ. ಈ ವಿಷಯದಲ್ಲಿ ನಾನು ಸ್ಪಷ್ಟಪಡಿಸುವುದೇನೆಂದರೆ ನೀವು ಮಾಧ್ಯಮದ ಮೂಲಕ ಏನು ಕೇಳಿದರೂ ಇಸ್ಲಾಮ್ ಧರ್ಮದಿಂದ ಭಯಪಡುವ ಅಗತ್ಯವಿಲ್ಲ. ಮುಸ್ಲಿಮರು ಖುರ್‌ಆನ್‌ನ್ನು ಪರಿಪೂರ್ಣ ಧಾರ್ಮಿಕ ಶಿಕ್ಷಣ ಎಂದು ನಂಬಿರುತ್ತಾರೆ. ಪವಿತ್ರ ಖುರ್‌ಆನಿನ ಮೇಲಿನ ನಮ್ಮ ಪ್ರೀತಿ, ಅನುಸರಣೆಯಿಂದಾಗಿ ನಮ್ಮ ವಿಶ್ವಾಸವೇನೆಂದರೆ ಧರ್ಮವು ಪ್ರತಿಯೊಬ್ಬರ ಆತ್ಮಕ್ಕೆ ಸಂಬಂಧಿಸಿದ್ದು ಅದೊಂದು ವೈಯಕ್ತಿಕ ವಿಷಯವಾಗಿದೆ.

ಪವಿತ್ರ ಖುರ್‌ಆನಿನ ಎರಡನೇ ಅಧ್ಯಾಯ 257 ವಚನದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ. ಏನೆಂದರೆ ಧರ್ಮದ ವಿಷಯದಲ್ಲಿ ಯಾವ ಬಲವಂತವು ಸಲ್ಲದು. ಆದುದರಿಂದ ಅಮುಸ್ಲಿಮರ ಮೇಲೆ ಮುಸಲ್ಮಾನರು ಬಲವಂತವಾಗಿ ತಮ್ಮ ವಿಶ್ವಾಸವನ್ನು ಹೇರುವುದಾಗಲಿ ಅಥವಾ ಬಲವಂತವಾಗಿ ತಮ್ಮ ದೃಷ್ಟಿಕೋನವನ್ನು ಈ ಭೂಭಾಗದಲ್ಲಿ ಸ್ಥಾಪಿಸುವುದಾಗಲಿ ಸಾಧ್ಯವಿಲ್ಲ. ಉಗ್ರವಾದವನ್ನು ನೆಚ್ಚಿರುವ ನಾಮಧಾರಿ ಮುಸಲ್ಮಾನರ ಒಂದು ಸಣ್ಣ ಗುಂಪು ಪವಿತ್ರ ಖುರ್‌ಆನಿನ ಶಿಕ್ಷಣದ ಪ್ರತಿನಿಧಿಯಾಗಲಿಕ್ಕೆ ಸಾಧ್ಯವಿಲ್ಲ. ನಾನು ಹಲವು ಸಲ ಈ ಮಾತನ್ನು ಹೇಳುತ್ತಾ ಬಂದಿದ್ದೇನೆ. ಸರ್ಕಾರಗಳಾಗಲೀ ಆಥವಾ ಅಧಿಕಾರಿಗಳಾಗಲಿ ಉಗ್ರವಾದಕ್ಕೆ ಕಠಿಣ ರೀತಿಯಲ್ಲಿ ತಡೆ ಒಡ್ಡಬೇಕು – ಆ ಉಗ್ರವಾದಿಗಳು ಮುಸ್ಲಿಮರಾಗಿರಲಿ ಅಥವಾ ಅಮುಸ್ಲಿಮರಾಗಿರಲಿ.

ಅಹಮದಿಯಾ ಮುಸ್ಲಿಂ ಜಮಾಅತ್ತಿನ ನೆಲೆಯಲ್ಲಿ ನಮ್ಮ ವಿಶ್ವಾಸವೇನೆಂದರೆ ಇಸ್ಲಾಮ್ ಧರ್ಮವು ಯಾವುದೇ ರೀತಿಯಲ್ಲಿ ಹಿಂಸೆ

ಅಥವಾ ಬಲ ಪ್ರಯೋಗದ ಮೂಲಕ ಧರ್ಮ ಪ್ರಚಾರ ಮಾಡಲು ಅನುಮತಿ ನೀಡುವುದಿಲ್ಲ. ಹೀಗಿರುವಾಗ ಇಸ್ಲಾಮ್ ಧರ್ಮದಿಂದ ಭಯಪಡುವ ಅಗತ್ಯವೇನಿದೆ? ಮತ್ತು ಇಸ್ಲಾಮಿನ ಸಭ್ಯತೆ ಅಥವಾ ಸಂಸ್ಕೃತಿಯಿಂದ ಅಪಾಯವಿದೆಯೆಂದು ಏಕೆ ಭಾವಿಸಬೇಕು?

ಇಸ್ಲಾಮಿನ ದೃಷ್ಟಿಯಿಂದ ಸಭ್ಯತೆ ಮತ್ತು ಸಂಸ್ಕೃತಿಯ ವ್ಯತ್ಯಾಸವನ್ನು ಬಹಿರಂಗಪಡಿಸಿದ ನಂತರ ನಾನು ಈಗ ಇಸ್ಲಾಮಿನ ಕೆಲವು ಪ್ರಾಥಮಿಕ ಶಿಕ್ಷಣಗಳ ಬಗ್ಗೆ ತಿಳಿಸ ಬಯಸುತ್ತೇನೆ. ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರಾದ ಮುಹಮ್ಮದ್(ಸ) ರವರ ಕುರಿತಾಗಿರುವ ಅನುಮಾನಗಳು ಮತ್ತು ತಪ್ಪು ಕಲ್ಪನೆಗಳನ್ನು ಹೋಗಲಾಡಿಸ ಬಯಸುತ್ತೇನೆ. ಈ ಸಂಕ್ಷಿಪ್ತ ಸಮಯದಲ್ಲಿ ಇಸ್ಲಾಮಿನ ಶಿಕ್ಷಣದ ಎಲ್ಲಾ ಹಕ್ಕುಗಳ ಮೇಲೆ ಬೆಳಕು ಚೆಲ್ಲುವುದು ಸಾಧ್ಯವಾಗದ ಮಾತಾದರೂ ಮಾನವ ಹಕ್ಕುಗಳ ಸ್ಥಾಪನೆಯ ಕುರಿತು ಇಸ್ಲಾಮಿನ ಶಿಕ್ಷಣವನ್ನು ಪ್ರಸ್ತುತಪಡಿಸುವೆನು.

ಮಾನವ ಹಕ್ಕುಗಳ ಕುರಿತು ಪವಿತ್ರ ಖುರ್‌ಆನಿನ 4ನೇ ಅಧ್ಯಾಯದ 37 ವಚನದಲ್ಲಿ ಹೀಗೆ ಹೇಳಲಾಗಿದೆ. "ನೀವು ಅಲ್ಲಾಹನನ್ನು ಆರಾಧಿಸಿರಿ, ಬೇರೆ ಏನನ್ನು ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ. ನಿಕಟ ಬಂಧುಗಳಿಗೂ, ಅನಾಥರಿಗೂ, ನಿರ್ಗತಿಕರಿಗೂ ನೆರೆಹೊರೆಯವನಿಗೂ, ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ," ಈ ವಚನದಲ್ಲಿ ಎಲ್ಲಿ ಮುಸ್ಲಿಮರಿಗೆ ಅಲ್ಲಾಹನನ್ನು ಆರಾಧಿಸುವ ಆದೇಶ ನೀಡಲಾಗಿದೆಯೋ ಅಲ್ಲಿ ಮಾತಾಪಿತರನ್ನು ಪ್ರೀತಿಸುವ ಶಿಕ್ಷಣವನ್ನೂ ನೀಡಿದೆ. ಮಾತಾಪಿತರನ್ನು ಪ್ರೀತಿಸುವ ಹಾಗೂ ಜನರಿಗೆ ಉಪಕಾರ ಮಾಡಲು ನೀಡಿದಂತಹ ಶಿಕ್ಷಣ ಯಾವುದೇ ಧರ್ಮಕ್ಕೆ ಅಥವಾ ಸಮುದಾಯಕ್ಕೆ ಅಪಾಯವುಂಟುಮಾಡಲು ಹೇಗೆ ಸಾಧ್ಯ? ಈ ವಚನವಂತೂ ಮುಸ್ಲಿಮರಿಗೂ ಉತ್ತಮವಾಗಿ ವರ್ತಿಸುವ ಶಿಕ್ಷಣ ನೀಡುತ್ತಿದೆ. ಅನಾಥರಿಗೂ ನಿರ್ಗತಿಕರಿಗೂ ಸುಖಶಾಂತಿ ಯನ್ನು ನೀಡುವ ಶಿಕ್ಷಣವನ್ನು ನೀಡುತ್ತಿದೆ.

ಈ ವಿಷಯದಲ್ಲಿ ನಮ್ಮ ವಿಶ್ವಾಸ: ಬಡವರಿಗೆ ನೆರವು ನೀಡುವ ಒಂದು ಮುಖ್ಯವಾದ ಸಾಧನವೆಂದರೆ ಅದು ಶಿಕ್ಷಣವಾಗಿದೆ. ವಸತಿಹೀನರಿಗೆ ಅಥವಾ ಬಡತನದಿಂದ ಬಳಲುತ್ತಿರುವ ಜನರಿಗೆ ಶಿಕ್ಷಣದ ಸವಲತ್ತನ್ನು ಒದಗಿಸಿದರೆ, ಅವರು ಸಂಕಷ್ಟದ ಹಿಡಿತದಿಂದ ಮುಕ್ತಿ ಪಡೆಯಬಹುದು. ಯುವಕರಿಗೆ ಇಂತಹ ಸದಾವಕಾಶಗಳನ್ನು ಒದಗಿಸಿಕೊಟ್ಟರೆ ಅವರು ನಿರಾಶೆಯ ಭಾವನೆಗಳನ್ನು ತೊರೆದು ಅಪರಾಧವೆಸಗುವವರಾಗದೆ ಸಮಾಜದ ಉಪಯುಕ್ತ ನಾಗರಿಕರಾಗಲು ಸಾಧ್ಯ. ಅದೇ ಕಾರಣದಿಂದ ಅಹಮದಿಯಾ ಮುಸ್ಲಿಮ್ ಜಮಾಅತ್ತಿನ ಸಂಪನ್ಮೂಲಗಳಿಂದ ನಾವು ಆಫ್ರಿಕಾದ ಹಲವು ದೇಶಗಳಲ್ಲಿ ಶಾಲೆಗಳನ್ನು ತೆರೆದಿದ್ದೇವೆ. ಉನ್ನತ ಶಿಕ್ಷಣ ಪಡೆಯಲು ಅಶಕ್ತರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

ನಮ್ಮ ದೃಷ್ಟಿಕೋನವೇನೆಂದರೆ ಶ್ರೀಮಂತ ರಾಷ್ಟ್ರಗಳು ಲೋಕದ ದುರ್ಬಲ ಸಮುದಾಯಗಳು ತಮ್ಮ ಹೆಜ್ಜೆಗಳನ್ನು ದೃಢವಾಗಿಸಲು ನೆರವು ನೀಡಬೇಕು. ಬಡ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡರೆ ಅಲ್ಲಿಯ ನಾಗರಿಕರಿಗೆ ಅವರದೇ ದೇಶಗಳಲ್ಲಿ ಇಂತಹ ಅವಕಾಶಗಳು ಒದಗಿಬಂದಂತಾಗುತ್ತದೆ. ಅವರಿಗೆ ತಮ್ಮ ದೇಶವನ್ನು ಬಿಟ್ಟು ಪರ ದೇಶಗಳಿಗೆ ವಲಸೆ ಹೋಗುವ ಅಗತ್ಯವಿರುವುದಿಲ್ಲ. ಅವರು ವಾಸಿಸುವ ರಾಷ್ಟ್ರಗಳು ಅಭಿವೃದ್ಧಿ ಹೊಂದಿದರೆ ಸಹಜವಾಗಿಯೇ ಅವರು ತಮ್ಮ ಭಾಗದ ಜೊತೆಯಲ್ಲಿ ಲೋಕದ ಇತರ ಭಾಗಗಳಿಗೂ ಪ್ರಯೋಜನ ನೀಡುವಂತರಾಗುವರು.

ಪವಿತ್ರ ಖುರ್‌ಆನಿನ ಮೇಲ್ಕಾಣಿಸಿದ ವಚನದಲ್ಲಿ ನೆರೆಹೊರೆಯವರ ಹಕ್ಕುಗಳ ಪಾಲನೆಯ ಕುರಿತು ವಿಶೇಷವಾದ ವಿವರ ಬಂದಿದೆ. ಅವರು ಮುಸ್ಲೀಮರಾಗಲೀ ಅಥವಾ ಅಮುಸ್ಲೀಮರಾಗಲಿ ನೆರೆಹೊರೆಯ ಪರಿಭಾಷೆಯನ್ನು ತುಂಬಾ ವಿಸ್ತೃತವಾಗಿ ವಿವರಿಸಲಾಗಿದೆ. ಇಸ್ಲಾಮಿನ ಸ್ಥಾಪಕರಾದ ಪೈಗಂಬರ್(ಸ) ಹೇಳಿದ್ದಾರೆ: ಅಲ್ಲಾಹನು ನೆರೆಹೊರೆಯವರ ಹಕ್ಕುಗಳ ಬಗ್ಗೆ ಎಷ್ಟೊಂದು ಒತ್ತು ನೀಡಿದ್ದಾರೆಂದರೆ ಅದರಿಂದ ತಮ್ಮ ಆಸ್ತಿಯಲ್ಲಿಯೂ ಅವರು ಪಾಲುದಾರರಾಗ ಬೇಕೇ ಎಂಬ ಅನುಮಾನ ಬರುತ್ತದೆ.

ಇಸ್ಲಾಮಿನ ಸ್ಥಾಪಕರಾದ ಮುಹಮ್ಮದ್(ಸ) ಈ ಉಪದೇಶವನ್ನು ನೀಡಿದ್ದಾರೆ. ಯಾವನು ಮನುಷ್ಯನಿಗೆ ಕೃತಜ್ಞರಾಗಿರುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞರಾಗಿರಲು ಸಾಧ್ಯವಿಲ್ಲ. ಎಷ್ಟೊಂದು ಸುಂದರವಾದ ತತ್ವವಾಗಿದೆ ಇದು! ಆದುದರಿಂದ ಅಲ್ಲಾಹನ ಆರಾಧನೆಯ ಜೊತೆಯಲ್ಲಿ ಮಾನವರಿಗೆ ಹಕ್ಕುಗಳನ್ನು ನಿಡುವುದೂ ಅಷ್ಟೇ ಅನಿವಾರ್ಯವಾಗಿದೆ.

ನಾನು ಮತ್ತೊಮ್ಮೆ ಕೇಳ ಬಯಸುತ್ತೇನೆ. ಇಂತಹ ಶಿಕ್ಷಣ ಪಾಶ್ಚಿಮಾತ್ಯ ಸಂಸ್ಕೃತಿಗೆ ಹೇಗೆ ಅಪಾಯವಾಗಲು ಸಾಧ್ಯ? ಆದುದರಿಂದ ನನ್ನ ಭಾವನೆಯಲ್ಲಿ ಪಾಶ್ಚಿಮಾತ್ಯರ ಈ ಅನುಮಾನ ಅರ್ಥಹೀನವಾಗಿದೆ. ಇಸ್ಲಾಮ್ ಮತ್ತು ಮುಸಲ್ಮಾನರಿಗೆ ಲೋಕದ ಈ ಭಾಗದಲ್ಲಿ ಯಾವ ಸ್ಥಾನವು ಇಲ್ಲ. ಮುಸಲ್ಮಾನರು ಈ ಸಮಾಜದ ಭಾಗವಾಗಿರಲು, ನೆರೆಹೊರೆಯರ ಹಕ್ಕುಗಳನ್ನು ಪಾಲಿಸಲು ಮತ್ತು ದೇಶ, ಸಮುದಾಯಗಳ ಪ್ರಗತಿ ಹಾಗೂ ಒಳಿತನ್ನು ಬಯಸಿ ಇಲ್ಲಿ ಬಂದವರಾದರೆ ಅದು ಖಂಡಿಸುವ ಮಾತಲ್ಲ. ಬದಲಾಗಿ ಪ್ರಶಂಸನೀಯ ಮಾತಾಗಿದೆ.

ಕೆಲವು ಜನರು ಭಾವಿಸುತ್ತಾರೆ. ಮುಸಲ್‌ಮಾನರಿಗೆ ಜಿಹಾದ್ ಮಾಡುವ ಆದೇಶವಿದೆ. ಆದುದರಿಂದ ಅವರು ಪಶ್ಚಿಮ ದೇಶಗಳನ್ನು ಸೇರಿ ಹಿಂಸಾತ್ಮಕ ಯುದ್ಧಗಳನ್ನು ನಡೆಸುವರು ಹಾಗೂ ಇಸ್ಲಾಮಿ ಸಂಸ್ಕೃತಿಯನ್ನು ಬಲವಂತವಾಗಿ ಸ್ಥಾಪಿಸಿ ಸಮಾಜದ ಶಾಂತಿ ಮತ್ತು ನೆಮ್ಮದಿಯನ್ನು ಕೆಡಿಸುವರು. ಈ ಭಾವನೆಯು ಜಿಹಾದಿನ ಅರ್ಥಕ್ಕೆ ವಿರುದ್ಧವಾಗಿದೆ ಹಾಗೂ ಇಸ್ಲಾಮಿನ ಇತಿಹಾಸದ ಪ್ರಾಥಮಿಕ ಕಾಲದಲ್ಲಿ ನಡೆದ ಯುದ್ಧಗಳ ಕುರಿತು ಜನ್ಮ ತಾಳಿರುವ ತಪ್ಪು ಕಲ್ಪನೆಗಳಿಂದಾಗಿವೆ. ವಾಸ್ತವದಲ್ಲಿ ಇಸ್ಲಾಮ್ ಧರ್ಮವು ರಕ್ತಪಾತ ಅಥವಾ ಹಿಂಸೆಯ ಧರ್ಮವಲ್ಲ.

ಒಂದು ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರ ಓರ್ವ ಸಹಾಬಿ ಇಸ್ಲಾಮಿ ಸೈನ್ಯದಲ್ಲಿ ಭಾಗವಹಿಸಿ ಜಿಹಾದ್ ಮಾಡಲು ಅನುಮತಿ ಕೋರಿದರು. ಇಸ್ಲಾಮಿನ ಸ್ಥಾಪಕರಾದ ಪೈಗಂಬರ್(ಸ) ರವರು ಅವರ ಈ ಬೇಡಿಕೆಯನ್ನು, ಅವರ ಮಾತಾಪಿತರು ವೃದ್ಧರಾಗಿದ್ದ ಕಾರಣದಿಂದ, ತಿರಸ್ಕರಿಸಿದರು. ಬದಲಾಗಿ ಅವನಿಗೆ ಈ ಆದೇಶವನ್ನು ನೀಡಿದರು. ನೀನು ಮನೆಗೆ ಹೋಗಿ ಅವರ ಸೇವೆಯನ್ನು ಮಾಡು. ಅದೇ ನಿನಗೆ ಜಿಹಾದ್ ಆಗಿರುತ್ತದೆ. ಜಿಹಾದ್ ಎಂಬುದು ಯುದ್ಧ ಅಥವಾ ರಕ್ತಪಾತದ ಉದ್ದೇಶವೇ ಹೊಂದಿದ್ದರೆ ಪೈಗಂಬರ್(ಸ) ರು ಅವರಿಗೆ ತಕ್ಷಣದಿಂದ ಅನುಮತಿ ನೀಡುತ್ತಿದ್ದರು. ಆದ್ದರಿಂದ ಮುಸ್ಲಿಮ್ ಸೈನ್ಯಕ್ಕೆ ಬಲವೂ ಬರುತ್ತಿತ್ತು.

ಈ ಸ್ಪಷ್ಟನೆಯ ಅಗತ್ಯವಿದೆ – ಇಸ್ಲಾಮಿನ ಪ್ರಾಥಮಿಕ ಕಾಲದಲ್ಲಿ ಆಗಿರುವಂತಹ ಯುದ್ಧಗಳು ಅಧಿಕಾರ ಪಡೆಯುವುದು ಅಥವಾ ಹಿಂಸೆಯ ಮೂಲಕ ಸ್ಥಳೀಯ ಜನರನ್ನು ಬಲವಂತವಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸುವಂತೆ ಮಾಡುವುದು ಆಗಿರಲಿಲ್ಲ. ಆಯುಧಗಳ ಉಪಯೋಗವು ರಕ್ಷಣೆ ಮತ್ತು ಧರ್ಮ ಸ್ವಾತಂತ್ರ್ಯದ ಸ್ಥಾಪವನೆಯ ಉದ್ದೇಶದಿಂದಾಗಿತ್ತು.

ಪವಿತ್ರ ಖುರ್‌ಆನಿನ 22ನೇ ಅಧ್ಯಾಯದ 40ನೇ ಮತ್ತು 41ನೇ ವಚನದಲ್ಲಿ ಹೀಗೆ ಹೇಳಲಾಗಿದೆ. ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ಅಲ್ಲಾಹನು ಜನರಲ್ಲಿ ಕೆಲವರು ಅವರು ಎಸಗುವ ದೌರ್ಜನ್ಯಗಳನ್ನು ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ, ಸನ್ಯಾಸಿ ಮಠಗಳು, ಇಗರ್ಜಿಗಳು, ಯಹೂದಿ ಮಂದಿರಗಳು, ಮಸೀದಿಗಳು ನಿರ್ನಾಮವಾಗುತ್ತಿರಲಿಲ್ಲ. ಇಸ್ಲಾಮ್ ಧರ್ಮವು ಎಲ್ಲಾ ಧರ್ಮಗಳ ರಕ್ಷಕನಾಗಿದೆ ಎಂಬುದಕ್ಕೆ ಇದು ಸಾಕ್ಷ್ಯವಾಗಿದೆ.

ಮಕ್ಕಳ ಪಾಲನೆ ಪೋಷಣೆಯ ಕುರಿತು ಪವಿತ್ರ ಖುರ್‌ಆನಿನ 6ನೇ ಅಧ್ಯಾಯದ 152ನೇ ವಚನದಲ್ಲಿ ಹೀಗೆ ಬರುತ್ತದೆ. ಮುಸಲ್ಮಾನರು ತಮ್ಮ ಸಂತತಿಯನ್ನು ಹತ್ಯೆ ಮಾಡದಿರಲಿ. ಇಲ್ಲಿ ಸಂತಾನದೊಂದಿಗೆ ಪ್ರೀತಿ ಮತ್ತು ವಾತ್ಸಲ್ಯದ ಆದೇಶವು ಇದೆ. ಅವರಿಗೆ ಶಿಕ್ಷಣ ಮತ್ತು ತರಬೇತಿ ನೀಡುವ ಆದೇಶವೂ ಇದೆ. ಏಕೆಂದರೆ ಅವರು ದೊಡ್ಡವರಾಗಿ ಅತ್ಯಂತ ಉತ್ತಮ ನಡವಳಿಕೆಯುಳ್ಳವರು ಹಾಗೂ ಉಪಯುಕ್ತ ನಾಗರಿಕರಾಗಿ ತಮ್ಮ ದೇಶದ ಅಥವಾ ಸಮುದಾಯಗಳ ಬಂಡವಾಳವಾಗಿರಲು ಸಾಧ್ಯವಾಗುವುದು.

ಅದೇ ರೀತಿ ಇಸ್ಲಾಮ್ ಧರ್ಮವು ಮುಸ್ಲಿಮರಿಗೆ ಈ ಆದೇಶವನ್ನು ನೀಡಿದೆ. ಅವರು ಸಮಾಜದ ದುರ್ಬಲ ಜನರ ಹಕ್ಕುಗಳನ್ನು ಸಂರಕ್ಷಿಸಬೇಕು. ಉದಾಹರಣೆಯಾಗಿ ಪವಿತ್ರ ಖುರ್‌ಆನಿನ 4ನೇ ಅಧ್ಯಾಯದ 7ನೇ ವಚನದಲ್ಲಿ ಮುಸಲ್ಮಾನರಿಗೆ ಅನಾಥ ಮಕ್ಕಳಿಗೆ ಶೋಷಣೆಗೆ ಒಳಪಡಿಸುವುದರಿಂದ ದೂರವಿರಬೇಕು. ಅವರ ಮಾನ ಹಾಗೂ ಆಸ್ತಿಯ ಹಕ್ಕುಗಳನ್ನು ಸಂರಕ್ಷಿಸಬೇಕು. ಅವರು ಪ್ರೌಢಾವಸ್ಥೆಗೆ ಬರುವವರೆಗೆ ಅವರ ಉಸ್ತುವಾರಿಯನ್ನು ವಹಿಸಿಕೊಳ್ಳಬೇಕು ಎಂದು.

ಪಶ್ಚಿಮ ಲೋಕದಲ್ಲಿ ಇಸ್ಲಾಮಿನ ಮೇಲೆ ಇನ್ನೊಂದು ಆರೋಪ ಕೇಳಿಬರುತ್ತದೆ. ಮುಸ್ಲಿಮ್ ಮಹಿಳೆಯರಿಗೂ ಮತ್ತು ಅವರ ಹಕ್ಕುಗಳಿಗೂ ಬೆಲೆ ಕೊಡುವುದಿಲ್ಲ. ಮೊದಲನೆಯದಾಗಿ ಸ್ಪಷ್ಟವಾಗಿದ್ದೇನೆಂದರೆ ಪ್ರಪ್ರಥಮವಾಗಿ ಇಸ್ಲಾಮ್ ಧರ್ಮವೇ ಮಹಿಳೆಗೆ ಆಸ್ತಿಯಲ್ಲಿ ಹಕ್ಕು ನೀಡಿದೆ. ಖುಲದ (ವಿಚ್ಛೇದನ) ಹಕ್ಕು ನೀಡಿದೆ. ಮತ್ತು ಅವರ ಬೇರೆ ಹಕ್ಕುಗಳನ್ನು ಪುಷ್ಟೀಕರಿಸಿದೆ. ಅದರ ಜೊತೆಯಲ್ಲಿ ಇಸ್ಲಾಮ್ ಧರ್ಮವು ಮಹಿಳೆಯರಿಗೆ ಶಿಕ್ಷಣದ ಮತ್ತು ವೈಯಕ್ತಿಕ ಪ್ರಗತಿಯ ಅವಕಾಶಗಳನ್ನು ಒದಗಿಸಿ ಕೊಟ್ಟಿದೆ. ಮತ್ತು ಅದರ ಪ್ರತಿಪಾದನೆ ಮಾಡುತ್ತದೆ.

ಹಝ್ರತ್ ರಸೂಲುಲ್ಲಾಹ್(ಸ) ರ ಒಂದು ಪ್ರಸಿದ್ಧ ವಚನವಾಗಿದೆ: ಮಾತೆಯರ ಪಾದದಡಿಯಲ್ಲಿ ಸ್ವರ್ಗವಿದೆ. ಈ ಪದಗಳು ಸಮಾಜದಲ್ಲಿ ಮಹಿಳೆಯ ಮಹೋನ್ನತ ಸ್ಥಾನಮಾನ ಹಾಗೂ ಅತ್ಯಂತ ಆದರಣೀಯ ಮತ್ತು ಅದ್ವಿತೀಯ ಸ್ಥಾನಮಾನಕ್ಕೆ ಸಾಕ್ಷಿಯಾಗಿದೆ. ಮಾತೆಯರ ಶಕ್ತಿ ಹಾಗೂ ಸಾಮರ್ಥ್ಯದಿಂದಲೇ ಅವರು ತಮ್ಮ ದೇಶವನ್ನು ಅಥವಾ ಸಮುದಾಯವನ್ನು ಸ್ವರ್ಗ ಸಮಾನವಾಗಿ

ಮಾಡಲು ಸಾಧ್ಯವಿದೆ. ತಮ್ಮ ಮಕ್ಕಳಿಗೆ ಶಾಶ್ವತವಾಗಿ ಸ್ವರ್ಗಗಳ ಬಾಗಿಲುಗಳನ್ನು ತೆರೆದಿರಿಸಲು ಸಾಧ್ಯ.

ಅದೇ ರೀತಿ ಪವಿತ್ರ ಖುರ್‌ಆನಿನ 4ನೇ ಅಧ್ಯಾಯದ 20ನೇ ವಚನದಲ್ಲಿ ಮುಸ್ಲಿಂ ಪುರುಷರಿಗೆ ಈ ಆದೇಶವನ್ನು ನೀಡಲಾಗಿದೆ: ಅವರು ತಮ್ಮ ಪತ್ನಿಯರೊಂದಿಗೆ ಪ್ರೀತಿ ಹಾಗೂ ಸಮಾಧಾನದಿಂದ ವರ್ತಿಸಬೇಕು. ಪಾಶ್ಚಿಮಾತ್ಯ ದೇಶಗಳಲ್ಲಂತೂ ಅವರ ಮನೆಗಳಲ್ಲಿ ಹಿಂಸೆಯ ಘಟನೆಗಳಿಂದಾಗಿ ಪೋಲೀಸರು ಮತ್ತು ನ್ಯಾಯಾಲಯಗಳ ಹಸ್ತಕ್ಷೇಪ ನಡೆಸದ ದಿನವೇ ಇರುವುದಿಲ್ಲ. ಹಲವು ಸಂಶೋಧನೆಗಳ ಮತ್ತು ವರದಿಗಳಿಂದ ಹಾಗೂ ಅಂಕೆ ಸಂಖ್ಯೆಗಳ ವಿಭಾಗದ, 2018ನೇಯ ವರದಿಯಿಂದ ಇದು ಸಾಬೀತಾಗಿದೆ. ಇಂತಹ ಅಪರಾಧಗಳು ಯಾವದೇ ಒಂದು ಧರ್ಮಕ್ಕೆ ಅನ್ವಯಿಸುವುದಿಲ್ಲ. ಇನ್ನೊಂದು ವರದಿಯಿಂದಲೂ ಇದು ಸಾಬೀತಾಗಿದೆ. ಜರ್ಮನಿಯು ಸಹ ಇಂತಹ ಘಟನೆಗಳಿಂದ ಮುಕ್ತವಾಗಿಲ್ಲ. ಆದುದರಿಂದ ಇಸ್ಲಾಮ್ ಧರ್ಮವನ್ನು ಮಹಿಳಾ ವಿರೋಧಿ ಧರ್ಮವೆಂದು ಸಾರುವುದು ತೀರ ಅನ್ಯಾಯದ ಮಾತಾಗಿದೆ.

ಇಸ್ಲಾಮ್ ಧರ್ಮವು ತನ್ನ ಅನುಯಾಯಿಗಳಿಂದ ಬಯಸುವುದೇನೆಂದರೆ ಅವರು ಇತರ ಧರ್ಮಗಳ ನೇತಾರರನ್ನೂ, ಅವರ ವಿಶ್ವಾಸಗಳನ್ನು ಗೌರವಿಸಬೇಕು. ಮದೀನ ಒಪ್ಪಂದವು ಈ ಶಿಕ್ಷಣಕ್ಕೆ ಸ್ಪಷ್ಟವಾದ ಸಾಕ್ಷ್ಯವನ್ನು ಹೊಂದಿದೆ. ಅಲ್ಲಿ ಯಹೂದ್ಯ ಗ್ರಂಥಕ್ಕೆ ಮಾನ್ಯತೆಯನ್ನು ನೀಡಲಾಗಿದೆ.

ಇಸ್ಲಾಮ್ ಧರ್ಮವು ತನ್ನ ಶತ್ರುಗಳ ಹಾಗೂ ವಿರೋಧಿಗಳ ಹಕ್ಕುಗಳನ್ನು ಸಂರಕ್ಷಿಸುವ ಶಿಕ್ಷಣ ನೀಡಿದೆ. 2ನೇ ಅಧ್ಯಾಯದ 191ನೇ ವಚನದಲ್ಲಿ ಯುದ್ಧ ಸ್ಥಿತಿಯಲ್ಲಿ ವಿರೋಧಿಗಳೊಡನೆ ಅತಿಕ್ರಮಣ ಮಾಡದಿರಲು ಉಪದೇಶಿಸಿದೆ. ವಿಷಾದದ ಸಂಗತಿ ಎಂದರೆ ಪ್ರಸಕ್ತ ಲೋಕದಲ್ಲಿ – ಗತಕಾಲದ ಎಲ್ಲಾ ಜನರು ಹೆಚ್ಚು ಸುಸಂಸ್ಕೃತರು ಎಂದು ಹೇಳಿಕೊಳ್ಳುವವರು – ವಿರೋಧಿ ದೇಶಗಳ ಹಕ್ಕಗಳನ್ನು ದಮನಿಸುತ್ತ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಾರೆ ಮತ್ತು ಸೇಡು ತೀರಿಸುವ ಯಾವ ಸಂದರ್ಭವನ್ನೂ ಬಿಟ್ಟುಕೊಡುವುದಿಲ್ಲ.

ಪವಿತ್ರ ಖುರ್‌ಆನಿನ 5ನೇ ಅಧ್ಯಾಯದ 9ನೇ ವಚನದಲ್ಲಿ ಅಲ್ಲಾಹನು ಹೇಳಿದ್ದಾನೆ: ಒಂದು ಜನಾಂಗದವರೊಂದಿಗಿನ ಶತ್ರುತ್ವವು ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ಸದಾ ನ್ಯಾಯಯುತವಾಗಿ ವರ್ತಿಸಿರಿ ಹಾಗೂ ಸೇಡಿನ ಭಾವನೆ ನಿಮ್ಮನ್ನು ಆವರಿಸದಿರಲಿ ಎಂದು.

ಈ ಶಿಕ್ಷಣದ ಅತ್ಯುತ್ತಮ ಮಾದರಿ ನಮಗೆ ಹಝ್ರತ್ ರಸೂಲುಲ್ಲಾಹ್(ಸ) ರವರು ಮಕ್ಕಾ ವಿಜಯದ ಸಂದರ್ಭದಲ್ಲಿ ತನ್ನ ಶತ್ರುಗಳೊಡನೆ ತೋರಿದ ಕ್ಷಮಾಶೀಲತೆ ಮತ್ತು ಕರುಣೆಯಿಂದ ತಿಳಿದು ಬರುತ್ತದೆ. ಇದಕ್ಕೆ ಇತಿಹಾಸ ಸಾಕ್ಷ್ಯವಹಿಸಿದೆ. ಮಕ್ಕಾದಲ್ಲಿ ಮುಸ್ಲಿಮರ ಮೇಲೆ ಅವ್ಯಾಹತ ಹಿಂಸೆಗಳನ್ನು ಕಷ್ಟಗಳನ್ನು ಒಡ್ಡಲಾಯಿತು. ಹತ್ಯೆಗಳನ್ನು ಮಾಡಲಾಯಿತು. ಅವರನ್ನು ಮನೆಗಳಿಂದ ಹೊರ ದೂಡಲಾಯಿತು. ಹಾಗಾಗಿ ಅವರು ವಿವಶರಾಗಿ ವಲಸೆ ಹೋಗಬೇಕಾಯಿತು. ಕೊನೆಗೆ ಹಝ್ರತ್ ರಸೂಲುಲ್ಲಾಹ್(ಸ) ವಿಜಯಶಾಲಿಯಾಗಿ ಮಕ್ಕಾ ನಗರ ಪ್ರವೇಶ ಮಾಡಿದಾಗ ಇಡೀ ನಗರ ಅವರ ವಶವಾಗಿತ್ತು. ಮುಸಲ್ಮಾನರ ಮೇಲೆ ದೌರ್ಜನ್ಯ ಎಸೆಗಿದವರ ಮೇಲೆ ಯಾವ ಸೇಡನ್ನು ತೀರಿಸಿಕೊಳ್ಳಲಾಗದು ಎಂದು ಅವರು ಘೋಷಣೆ ಮಾಡಿದರು. ಇಸ್ಲಾಮಿನ ಶಿಕ್ಷಣದನ್ವಯ ಮುಸಲ್ಮಾನರ ಮೇಲೆ ದೌರ್ಜನ್ಯ ಎಸಗಿದವರಿಗೆ ಕ್ಷಮೆ ನೀಡಲಾಗುವುದು. ಯಾರೊಂದಿಗೂ ಅನ್ಯಾಯವಾಗಿ ವರ್ತಿಸಲಾಗುವುದಿಲ್ಲ. ಅವರು ಇಸ್ಲಾಮ್ ಸ್ವೀಕರಿಸಲಿ ಅಥವಾ ಬಿಡಲಿ ಎಂದು ಅವರು ಘೋಷಿಸಿದರು.

ಇಸ್ಲಾಮ್ ಮೂಲಕ ಸಮಾಜದಲ್ಲಿದ್ದ ಅತ್ಯಂತ ಅಸಹ್ಯವಾದ ಗುಲಾಮಗಿರಿ ಪದ್ಧತಿಯನ್ನು ನಿರ್ಮೂಲನಗೊಳಿಸುವ ಕುರಿತು ಒಂದು ಕ್ರಾಂತಿಯೇ ಉಂಟಾಗಿತ್ತು. ಆ ಕಾಲಕ್ಕೆ ಅದು ಸಾಮಾನ್ಯ ಮಾತಾಗಿತ್ತು. ಪವಿತ್ರ ಖುರ್‌ಆನಿನ 24ನೇ ಅಧ್ಯಾಯದ 34ನೇ ವಚನದಲ್ಲಿ ಹೀಗೆ ಹೇಳಲಾಗಿದೆ. ನಿಮ್ಮ ಗುಲಾಮರ ಪೈಕಿ ಯಾರಾದರೂ ಬಿಡುಗಡೆಯ ಒಪ್ಪಂದವನ್ನು ಬರೆದುಕೊಡಲು ಆಪೇಕ್ಷಿಸಿದರೆ ಅವರಿಗೆ ಅರ್ಹತೆ ಇದೆಯೆಂದು ನಿಮಗೆ ಮನವರಿಕೆಯಾದರೆ ಬರೆದುಕೊಡಿರಿ. ಅವರು ಸಾಂಪತ್ತಿಕ ಸಹಾಯ ಯಾಚಿಸಿದರೆ ಉಚಿತ ರೀತಿಯಲ್ಲಿ ಕಂತುಗಳಲ್ಲಿ ಮರಳಿಸುವಂತೆ ನೆರವು ನೀಡಿರಿ ಅಥವಾ ಮನ್ನಾ ಮಾಡಿರಿ. ಇಂದು ಆ ತರಹದ ಗುಲಾಮಗಿರಿಯಿಲ್ಲ, ಆದರೆ ಆರ್ಥಿಕ ದಿಗ್ಬಂಧನ ಹೇರುವ ಮೂಲಕ ಅದನ್ನು ಜಾರಿಯಲ್ಲಿರುವಂತೆ ಮಾಡಲಾಗಿದೆ. ಶಕ್ತಿಯುತ ರಾಷ್ಟ್ರಗಳ ಮತ್ತು ದುರ್ಬಲ ರಾಷ್ಟ್ರಗಳ ಮಧ್ಯೆಯಿರುವ ಸಂಬಂಧವು ಒಡೆಯನ ಮತ್ತು ದಾಸನ ಸಂಬಂಧದಂತಾಗಿದೆ. ಉದಾಹರಣೆಗೆ ಶ್ರೀಮಂತ ರಾಷ್ಟ್ರಗಳು ಬಡ ರಾಷ್ಟ್ರಗಳಿಗೆ ನೀಡುವ ಸಾಲವಾಗಿದೆ. ಅದನ್ನು ಪಡೆದ ನಂತರ ಅವರು ಹೇರಿದ ಎಲ್ಲ ಶರತ್ತುಗಳನ್ನು ಅದು ಎಷ್ಟೇ ಕಠಿಣವಾಗಿದ್ದರೂ ಮನ್ನಿಸಬೇಕಾಗುತ್ತದೆ. ಅಸಾಧಾರಣ ಬಡ್ಡಿಯ ಭಾರವು ಅವರನ್ನು ವಿವಿಧ ರೀತಿಯ ಆಪತ್ತುಗಳಿಗೆ ಗುರಿಯಾಗಿಸುತ್ತದೆ. ಪರಿಣಾಮವಾಗಿ ಸಾಲ ನೀಡಿದ ದೇಶಗಳಿಗೆ ಶರಣಾಗಬೇಕಾಗುತ್ತದೆ. ಅದರ ಹೊರತು ಬೇರೆ ಮಾರ್ಗವಿರುವುದಿಲ್ಲ. ಹಾಗಾಗಿ ಈ ಹೇರಿಕೆಯು ಅನೈತಿಕವಾಗಿದೆ.

ಇಸ್ಲಾಂ ಧರ್ಮವು ಪ್ರಾರಂಭದಲ್ಲಿಯೇ ಅಮುಸ್ಲಿಮರ ಹಕ್ಕುಗಳನ್ನು ಗೌರವಿಸಿದೆ. ಮುಸ್ಲಿಮರನ್ನು ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆ ಉಂಟು ಮಾಡಲು ಬಾಧ್ಯಸ್ಥನ್ನಾಗಿಸಿದೆ. ಉದಾಹರಣೆಗೆ ಪವಿತ್ರ ಖುರ್‌ಆನಿನ 6ನೇ ಅಧ್ಯಾಯದ 109 ನೇ ವಚನದಲ್ಲಿ ಹೀಗೆ ನಿರ್ದೇಶಿಸಲಾಗಿದೆ: ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು.

ಈ ಸಂಕ್ಷಿಪ್ತ ಸಮಯದಲ್ಲಿ ನಾನು ಕೆಲವು ತತ್ವಗಳನ್ನಷ್ಟೇ ವಿವರಿಸಿದ್ದೇನೆ. ಅದರಿಂದ ಇಸ್ಲಾಮ್ ಯಾವ ರೀತಿ ಮಾನವ ಹಕ್ಕುಗಳನ್ನು ಸಾಬೀತುಪಡಿಸಿದೆ ಎಂಬುದು ತಿಳಿದುಬರುತ್ತದೆ. ನನ್ನ ಈ ವಿವರಣೆಗಳಿಂದ ನಿಮಗೆ ತೃಪ್ತಿಯಾಗಿರಬಹುದೆಂದು ಭಾವಿಸುತ್ತೇನೆ. ಇಸ್ಲಾಮ್ ಧರ್ಮದಿಂದ ಪಾಶ್ಚಿಮಾತ್ಯ ಸಭ್ಯತೆಗಾಗಲೀ ಅಥವಾ ಸಂಸ್ಕೃತಿಗಾಗಲೀ ಅಪಾಯವಿಲ್ಲ ಎಂಬ ಮಾತು ಮನವರಿಕೆಯಾಗಿರಬಹುದೆಂದು ಭಾವಿಸುತ್ತೇನೆ. ಯಾವೊಬ್ಬ ಮುಸ್ಲಿಮನು ಇತರ ಅಮುಸ್ಲಿಮರ ಹಕ್ಕುಗಳನ್ನು ಧಮನಿಸುತ್ತಾನೋ ಅವನು ಮೊದಲನೆಯದಾಗಿ ಇಸ್ಲಾಮಿನ ಶಿಕ್ಷಣವನ್ನು ವಿರೋಧಿಸುತ್ತಿದ್ದಾನೆ ಅಥವಾ ಅವನು ಈ ಶಿಕ್ಷಣದಿಂದ ಅಜ್ಞಾನಿಯಾಗಿದ್ದಾನೆ.

ಒಟ್ಟಿನಲ್ಲಿ ನಾವು ಇಂದು ಲೋಕವನ್ನು ನಾಶದ ಹಾದಿಯಲ್ಲಿ ಹೋಗುವುದನ್ನು ಕಾಣುತ್ತಿದ್ದೇವೆ. ಅದರ ಸ್ಥಿತಿ ಇನ್ನೂ ಹದಗೆಡುವಂತೆ ಆಗಿದೆ.

ಆದುದರಿಂದ ಈ ಮಾತನ್ನು ಗ್ರಹಿಸುವ ಅವಶ್ಯಕತೆ ಇದೆ. ಈ ಪದಗಳು ದೂರದ ಪರಿಣಾಮಗಳನ್ನು ಉಂಟು ಮಾಡಬಹುದು. ಆದುದರಿಂದ ಸಾಂಸ್ಕೃತಿಕ ಘರ್ಷಣೆಯ ಮಾತುಗಳನ್ನು ಆಡುವ ಬದಲು ದೇಶ ದೇಶಗಳ ಮಧ್ಯೆ ಅನಗತ್ಯ ಒತ್ತಡ ಹೇರದಂತೆ, ಒಬ್ಬರು ಇನ್ನೊಬ್ಬರ ಧಾರ್ಮಿಕ ರೀತಿ ನೀತಿಗಳ ಮೇಲೆ ಆಕ್ರಮಣ ಮಾಡದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಇನ್ನೊಬ್ಬರ ವಿಶ್ವಾಸಗಳ ಮೇಲೆ ನಿಷೇಧ ಹೇರುವ ಬದಲು ನಾವು ತಿಳಿಯಬೇಕಾಗಿರುವುದು ನಾವೆಲ್ಲ ಒಂದೇ ಮಾನವ ಕುಲದ ಭಾಗವಾಗಿದ್ದೇವೆ ಎಂಬುದು. ಇಂದು ನಾವು ಇತರರೊಡನೆ ಮೊದಲಿಗಿಂತ ಸಮೀಪವಾಗಿದ್ದೇವೆ. ವಿವಿಧ ವರ್ಣ, ವರ್ಗಗಳ ಭೇಧಭಾವವಿಲ್ಲದೆ ಧರ್ಮವನ್ನು ಆದರಿಸುತ್ತಾ ನಾವು ಐಕ್ಯತೆ ಸಾಧಿಸುವತ್ತ ಗಮನಹರಿಸಬೇಕಾಗಿದೆ. ಅದರಿಂದ ಲೋಕದಲ್ಲಿ ಶಾಂತಿ ಸ್ಥಾಪನೆ ಆಗಲು ಸಾಧ್ಯವಿದೆ.

ಆದರೆ ಪ್ರಸಕ್ತ ಪರಿಸ್ಥಿತಿಗಳು ಇದರ ತದ್ವಿರುದ್ಧವಾಗಿವೆ. ಮುಸ್ಲಿಮರಾಗಲಿ ಅಮುಸ್ಲಿಮರಾಗಲಿ ತನ್ನ ಸ್ವಾರ್ಥ ಸಾಧನೆಗಳಿಗಾಗಿ ನ್ಯಾಯ, ನೀತಿಯನ್ನು ಪರಿಗಣಿಸದೆ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹವಣಿಸುತ್ತಾರೆ. ಅಂಧಕಾರಮಯ ಗತಕಾಲಗಳ ಹಾಗೆ ವಿರೋಧಾತ್ಮಕ ತತ್ವಗಳಲ್ಲಿ ಐಕ್ಯಮತ್ಯ ಹೊಂದಿದವರಾಗಿದ್ದಾರೆ. ಗುಂಪು ಕಟ್ಟಿಕೊಂಡಿದ್ದಾರೆ. ಹಾಗಾಗಿ ಅವರು ಲೋಕವನ್ನು ನಾಶದ ಕೂಪಕ್ಕೆ ತಳ್ಳಬಯಸುತ್ತಾರೆ.

ಇಂದು ಹಲವು ದೇಶಗಳು ಪರಮಾಣು ಆಯುಧಗಳನ್ನು ಹೊಂದಿವೆ. ಆ ಮೂಲಕ ತಾವು ಬಯಸಿದ ಸಂಸ್ಕೃತಿಯನ್ನು ನಾಶ ಮಾಡಲು ಶಕ್ತಿ ಹೊಂದಿರುತ್ತಾರೆ. ಆ ಆಯುಧಗಳನ್ನು ಬಳಕೆಗೆ ತರುವುದಿಲ್ಲ ಎಂಬ ಖಾತರಿ ಯಾರಿಗಿದೆ? ಅಥವಾ ಆ ಆಯುಧಗಳು ದಾರಿ ತಪ್ಪಿದವರ ಕೈಗಳಿಗೆ ಸಿಗದಿರುವಂತಹ ಖಾತರಿ ಯಾರಿಗಿದೆ? ಈ ಆಯುಧಗಳು ಬಳಕೆಯಾದರೆ ಅದರ ದುಷ್ಪರಿಣಾಮಗಳು ಕೇವಲ ನಮ್ಮ ಮೇಲೆ ಮಾತ್ರ ಆಗುವುದಿಲ್ಲ. ಬದಲಾಗಿ ಅದನ್ನು ನಮ್ಮ ಮುಂದಿನ ಪೀಳಿಗೆಗೂ ಅನುಭವಿಸಬೇಕಾಗಬಹುದು. ಹಲವು ಪೀಳಿಗೆಯವರು ದೈಹಿಕ ಅಂಗವಿಕಲರಾಗಿ ಜನ್ಮ ಪಡೆಯಬಹುದು. ಅದಾಗ್ಯೂ ಅವರು ಯಾವ ತಪ್ಪನ್ನೂ ಮಾಡದವರಾಗಿರುತ್ತಾರೆ.

ನಾವು ನಮ್ಮ ಮುಂದಿನ ಪೀಳಿಗೆಗೆ ಇದನ್ನು ಬಳುವಳಿಯಾಗಿ ಕೊಡ ಬಯಸುತ್ತೇವೆಯೆ? ಖಂಡಿತ ಇಲ್ಲ. ಆದುದರಿಂದ ಧಾರ್ಮಿಕ, ಜನಾಂಗೀಯ ಅಥವಾ ರಾಜಕೀಯ ಆಧಾರದ ಮೇಲೆ ದ್ವೇಷದ ಜ್ವಾಲೆ ಹರಡುವ ಬದಲಿಗೆ ನಾವು ನಮ್ಮ ನಡವಳಿಕೆಯನ್ನು ತಡ ಮಾಡದೆ ಬದಲಾಯಿಸಿಕೊಳ್ಳಬೇಕಾಗಿದೆ.

ಬನ್ನಿ, ಎಲ್ಲ ಭಿನ್ನಮತಗಳನ್ನು ಮರೆತು ಪರಸ್ಪರ ಗೌರವ, ಸಹಿಷ್ಣುತೆ, ಮತ್ತು ಪ್ರೀತಿಯ ಭಾವನೆಯೊಂದಿಗೆ ಜಾಗತಿಕ ಶಾಂತಿ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಸಲುವಾಗಿ ಒಟ್ಟುಗೂಡಿ ಪ್ರಯತ್ನಿಸೋಣ. ಈ ಪದಗಳೊಂದಿಗೆ ಇನ್ನೊಮ್ಮೆ ಈ ಸಮಾರಂಭದಲ್ಲಿ ನೀವು ಭಾಗವಹಿಸಿದ್ದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಹುಝೂರ್ ಅವರ ಈ ಸಂಬೋಧನೆ 8 ಗಂಟೆ 17 ನಿಮಿಷಕ್ಕೆ ಮುಕ್ತಾಯಗೊಂಡಿತು. ಅನಂತರ ಅವರು ದುಆ ಮಾಡಿಸಿದರು. ಅತಿಥಿಗಳು ತಮ್ಮದೇ ರೀತಿಯಲ್ಲಿ ಪಾಲ್ಗೊಂಡರು. ಅನಂತರ ಅತಿಥಿಗಳು ಅವರ ಜೊತೆ ಔತಣಕೂಟದಲ್ಲಿ ಭಾಗವಹಿಸಿದರು.

Dinner ನಂತರ ಹಲವು ಅತಿಥಿಗಳು ಸರತಿಯಂತೆ ಹುಝೂರ್‌ರನ್ನು ಭೇಟಿಯಾಗುವ ಭಾಗ್ಯ ಪಡೆದರು. ಅವರು ಪ್ರೀತಿಯಿಂದ ಅತಿಥಿಗಳೊಂದಿಗೆ

ಮಾತನಾಡುತ್ತಿದ್ದರು. ಕೆಲವು ಅತಿಥಿಗಳು ಅವರೊಂದಿಗೆ ಪಕ್ಕದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಕೆಲ ಸಮಯದವರೆಗೆ ಮಾತನಾಡುತ್ತಿದ್ದರು. ಜೊತೆ ಜೊತೆಯಲ್ಲಿ ಭಾವಚಿತ್ರವನ್ನೂ ತೆಗೆಯಿಸಿಕೊಳ್ಳುತ್ತಿದ್ದರು.

9.45 ಗಂಟೆಗೆ ಈ ಸಮಾರಂಭ ಮುಕ್ತಾಯಗೊಂಡಿತು ಮತ್ತು ಹುರ್ಘೂರ್ ಹೋಟೆಲಿನಿಂದ ಹೊರಗೆ ಆಗಮಿಸಿದರು. ಇಲ್ಲಿಂದ ಮರಳಿ ಬರ್ಲಿನ್‌ನ ಖದೇಜ ಮಸೀದಿಗೆ ಹೋಗುವ ಮುಂಚೆ Brandener Burger Gate ಮುಂದೆ ಸ್ಥಳೀಯ ಆಯೋಜಕರ ಮತ್ತು ಅತಿಥಿ ತಂಡದ ಸದಸ್ಯರು ತಮ್ಮ ಪ್ರೀತಿಯ ಇಮಾಮರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಅನಂತರ ಅವರು ಇಲ್ಲಿಂದ ಹೊರಟು ಬರ್ಲಿನ್ ತಲುಪಿದರು. ಹತ್ತು ಕಾಲು ಗಂಟೆಗೆ ಖದೀಜ ಮಸೀದಿಗೆ ಆಗಮಿಸಿ ಮಗ್ರೀಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಅತಿಥಿಗಳ ವಿಶ್ವಾಸವರ್ಧಕ ಅನಿಸಿಕೆಗಳು**

ಹುರ್ಘೂರರ ಸಂಬೋಧನೆಯಲ್ಲಿ ಭಾಗವಹಿಸಿದ ಸಂಸದರು ಮತ್ತು ಇತರ ಅತಿಥಿಗಳು ಅವರ ಸಂಬೋಧನೆಯಿಂದ ತುಂಬಾ ಪ್ರಭಾವಿತರಾದರು. ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ಮತ್ತು ಭಾವನೆಗಳನ್ನು ಬಹಿರಂಗಪಡಿಸಿದ್ದಾರೆ. ಅವು ಹೀಗಿವೆ.

* ಜರ್ಮನ್ ಸಂಸತ್ ಸದಸ್ಯರಾದ Bettima Muller ಸಾಹಿಬಾ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಸಂಬೋಧನೆಯಿಂದ ಶಾಂತಿಯ ಪರಿಮಳ ಸೂಸುತಿತ್ತು. ಅವರ ವ್ಯಕ್ತಿತ್ವದಲ್ಲಿಯೂ ಶಾಂತಿ, ಸುರಕ್ಷತೆ ಮತ್ತು ಸತ್ಯತೆಯ ಪ್ರಭಾವ ಒಳಗೊಂಡಿತ್ತು. ಇದು ಕಾರ್ಯಕ್ರಮದ ಎಲ್ಲಾ ಪರಿಸರದಿಂದಲೂ ನನಗೆ ಭಾಸವಾಗುತ್ತಿತ್ತು.

* ಸಂಸತ್ ಸದಸ್ಯರಾದ Zakin Nastic ಸಾಹಿಬಾ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಎಲ್ಲ ರೀತಿಯಿಂದಲೂ ತಮ್ಮ ದೃಷ್ಟಿಕೋನ ಸ್ಪಷ್ಟಪಡಿಸಿದ್ದಾರೆ. ಯಾವ ಅನುಮಾನವೂ ಉಳಿಸಲಿಲ್ಲ. ಇಂತಹ ಸ್ವಚ್ಚ ಪಾರದರ್ಶಕ ಸಂಬೋಧನೆ ಸತ್ಯ ಮತ್ತು ಹಿತಚಿಂತನೆಯಿಲ್ಲದೆ ಹೊರಬರಲು ಸಾಧ್ಯವಿಲ್ಲ. ನನಗೆ ಇಮಾಮ್ ಜಮಾಅತ್ ಅಹ್ಮದಿಯರ ಒಂದೊಂದು ಪದಗಳೊಂದಿಗೂ ಸಹಮತವಿದೆ.

* Alexandar Radwan ಸಾಹಿಬ್, ಸಂಸತ್ ಸದಸ್ಯರು, ಹೇಳಿದರು: ಅವರು ನೀಡಿದ ಶಾಂತಿ ಮತ್ತು ಸುರಕ್ಷತೆಯ ಸಂದೇಶದ ಮೂಲವು ಪವಿತ್ರ ಖುರ್‌ಆನ್ ಆಗಿತ್ತು. ಅವರು ತಮ್ಮ ನಿಲುವನ್ನು ಖುರ್‌ಆನ್ ಮತ್ತು ಇಸ್ಲಾಮಿನ ಸ್ಥಾಪಕರ ಪ್ರವಚನಗಳಿಂದ ರುಜು ಮಾಡಿದರು. ಈ ವಿಷಯವು ಆಧುನಿಕ ಮತ್ತು ಪ್ರಸಕ್ತ ಪರಿಸ್ಥಿತಿಗಳಿಗೆ ಬೇಕಾಗುವಂತಿತ್ತು. ಆದರೆ ಖಲೀಫರು ತಮ್ಮ ನಿಲುವು ಇಸ್ಲಾಮಿನ ಪುರಾತನ ಸಾಕ್ಷ್ಯಗಳೊಂದಿಗೆ ಪ್ರಸ್ತುತಪಡಿಸಿದರು. ಇಸ್ಲಾಮ್ ಮತ್ತು ಖುರ್‌ಆನ್ ತಮ್ಮ ಆರಂಭಿಕ ದಿನಗಳಿಂದಲೂ ಮಾನವೀಯತೆ, ಶಾಂತಿ ಮತ್ತು ಸುರಕ್ಷತೆಯ ಸಂದೇಶಗಳನ್ನು ಒಳಗೊಂಡಿದೆ. ನಾನು ಭಾವಿಸುವುದೇನೆಂದರೆ ಈ ಭಾಷಣವು ವಿಸ್ತೃತ ರೂಪದಲ್ಲಿ ಪ್ರಸಾರವಾಗಬೇಕು. ಏಕೆಂದರೆ ಇದರಿಂದ ಪಶ್ಚಿಮದಲ್ಲಿ ಇಸ್ಲಾಮಿನ ಬಗ್ಗೆ ನೈಜ ಶಿಕ್ಷಣವನ್ನು ತಿಳಿಯಲು ಅನುಕೂಲವಾಗುತ್ತದೆ.

* Chiristine Buchholz ಸಾಹಿಬಾ, ಸಂಸತ್ ಸದಸ್ಯರು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು. ಇಮಾಮ್ ಜಮಾಅತ್ ಅಹಮದಿಯಾ ಅವರು ಪ್ರಸಕ್ತ ಪರಿಸ್ಥಿತಿಗಳನ್ನು ಸರಿಯಾದ ರೀತಿಯಲ್ಲಿ ತಿಳಿದವರಾಗಿದ್ದಾರೆ. ಅವರು ಹೇಳಿದ ಮಾತುಗಳು ಅಕ್ಷರಶ: ಸರಿಯಾಗಿವೆ. ಅವರ ಮಾತುಗಳಲ್ಲಿ ಅಶಾಂತ ಸಮಾಜಕ್ಕೆ ಬೇಕಾದ ಚಿಕಿತ್ಸೆಯಿದೆ.

* Gokhal Yesil ಸಾಹಿಬಾ ಹೇಳುತ್ತಾರೆ. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಸ್ಪಷ್ಟ ನಿಲುವುಗಳು ನನ್ನ ಮೇಲೆ ಗಾಢವಾದ ಪರಿಣಾಮ ಬೀರಿದೆ. ನನ್ನ ಆಶಯವೇನೆಂದರೆ ಈ ಸಂದೇಶ ಎಲ್ಲಿಯವರೆಗೆ ತಲುಪುವುದೋ ದ್ವೇಷಮುಕ್ತ ಜನರು ಪ್ರಾಮಾಣಿಕವಾಗಿ ಅವರ ಮಾತುಗಳನ್ನು ಸಮ್ಮತಿಸುವರು.

* Niel Annen ಸಾಹಿಬಾ ಅವರು ಕೇಂದ್ರೀಯ ಮಂತ್ರಿಗಳಾಗಿರುವವರು, ತಮ್ಮ ಅನಿಸಿಕೆಗಳನ್ನು ಹೀಗೆ ಹೇಳಿದರು. ಇಮಾಂ ಜಮಾಅತ್ ಅಹಮದಿಯಾ ಯಾವ ರೀತಿಯಲ್ಲಿ ವಿಶ್ಲೇಷಣಾತ್ಮಕವಾಗಿ, ಸವಿವರವಾಗಿ ತುಂಬಾ ತುಲನಾತ್ಮಕವಾಗಿ ಇಸ್ಲಾಮ್ ಅಹಮದಿಯತ್ ಹಾಗೂ ಎಲ್ಲಾ ಧರ್ಮಗಳ ಪರಿಚಯ ಹಾಗೂ ಸಾಮಾಜಿಕ ಪಾತ್ರಗಳನ್ನು ಸ್ಪಷ್ಟಪಡಿಸಿದ್ದಾರೆ. ಅದನ್ನು ತಿಳಿದ ನಂತರ ನನಗೆ ಪಾಕಿಸ್ತಾನದಲ್ಲಿ ಇಂತಹ ಜಮಾಅತ್ತಿನ ವಿರುದ್ಧ ಕೈಗೊಳ್ಳುತ್ತಿರುವ ಹಿಂಸಾತ್ಮಕ ವಿಷಯಗಳು ಮತ್ತು ಅವರ ಹಕ್ಕುಗಳ ಧಮನ ಮಾಡುತ್ತಿರುವುದರ ಕುರಿತು ನಿಮ್ಮ ಪರವಾಗಿ ಧ್ವನಿ ಎತ್ತಲು ನನಿಗೆ ಸುಲಭವಾಗಿದೆ. ಅಹಮದಿಯಾ ಜಮಾಅತ್ತಿನ ಮಾನವೀಯ ಹಕ್ಕುಗಳ ರಕ್ಷಣೆಗಾಗಿ ಎತ್ತುವ ಧ್ವನಿ ಯಾವ ಧರ್ಮ ಅಥವಾ ಪಂಥದ ಪರವಾಗಿ ಅಲ್ಲ ಬದಲು ಸಾಮೂಹಿಕ ಹಾಗೂ ಜಾಗತಿಕ ಮಟ್ಟದಲ್ಲಿ ಮಾನವೀಯ ಮೌಲ್ಯಗಳ ರಕ್ಷಣೆಗಾಗಿ ಮಾಡುವ ಪ್ರಯತ್ನ ಎನ್ನಬಹುದು.

* Christoph Strack ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ. ನಾನು ನನ್ನ ಜೀವನದಲ್ಲಿ ಮುಸಲ್ಮಾನರು ಆಯೋಜಿಸಿದಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ತುಂಬಾ ಅಪರೂಪವಾಗಿದೆ. ಇಲ್ಲಿಯ ವಾತಾವರಣವು ತುಂಬಾ ಶಾಂತಿದಾಯಕವಾಗಿದೆ. ಇಲ್ಲಿ ಆಡುವ ಎಲ್ಲಾ ಮಾತುಗಳು ತುಂಬಾ ಅರ್ಥಗರ್ಭಿತ ಹಾಗೂ ಪುರಾವೆ ಸಹಿತವಾಗಿವೆ. ಇಂತಹ ಸುಂಸ್ಕೃತಿ ಹಾಗೂ ಸಾಮಾಜಿಕ ಪ್ರಗತಿಯನ್ನು ಒಳಗೊಂಡ ಪರಿಸರವನ್ನು ಕಂಡು ತುಂಬಾ ಸಂತೋಷವಾಯಿತು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಸತ್ಯಸಂಧತೆ ಹಾಗೂ ಮಾನವೀಯತೆಯ ಪೂರ್ಣ ಪರಿಚಯ ನಮಗಾಯಿತು. ಅವರ ನಿಲುವಿನಂದ ನಮಗೆ ಯುದ್ಧಗಳ ಅಪಾಯದ ಕುರಿತು ಖಂಡಿಸಿ ಮಾತನಾಡಲು ಶಕ್ತಿ ಲಭಿಸುತ್ತದೆ.

* Amnesty International ನ ಪ್ರತಿನಿಧಿ ಜನಾಬ್ ಶಾ ಸಾಹಿಬ್ ಹೇಳುತ್ತಾರೆ. ಇಮಾಮ್ ಜಮಾಅತ್ ಅಹಮದಿಯಾ ಅವರ ಭಾಷಣ ಅಲ್ಲದೆ ಅವರ ವ್ಯಕ್ತಿತ್ವ ನನ್ನ ಮೇಲೆ ಎಷ್ಟೊಂದು ಆಳವಾದ ಪ್ರಭಾವ ಬೀರಿದೆಯೆಂದರೆ ಅದನ್ನು ಕೇಳಿ ನನಗೆ ನೆಮ್ಮದಿ ದೊರೆಯುವಂತಾಯಿತು. ಅವರು ತಮಗಿಂತ ಮುಂಚಿನ ಖಲೀಫರ ಸಂಸ್ಕೃತಿ ಹಾಗೂ ಸಭ್ಯತೆಯ ಪರಿಚಯವನ್ನು ನೀಡಿದ್ದಾರೆ ಮತ್ತು ಅವುಗಳಿಗಿರುವ ಪರಸ್ಪರ ಸಂಬಂಧದ ವಿವರಣೆ ನೀಡಿದ್ದಾರೆ. ಅದನ್ನು ಆಧುನಿಕ ಯುಗದ ವಿದ್ವಾಂಸರಿಗೆ ತಳ್ಳಿ ಹಾಕಲು ಸಾಧ್ಯವಿಲ್ಲ. ಖಲೀಫರು ಖುರ್‌ಆನ್ ವಚನಗಳನ್ನು ಅತ್ಯುತ್ತಮ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ದುರದೃಷ್ಟವಶಾತ್ ಈ ವಚನಗಳನ್ನು ಇಸ್ಲಾಂ ವಿರೋಧಿಗಳು ತಿರುಚಿ ಪ್ರಸ್ತುತಪಡಿಸುತ್ತಾರೆ.

* Fillis Lupot ಸಾಹಿಬ್, ಸಂಸತ್ ಸದಸ್ಯರಾದ ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ವಿನಯವಂತ ವ್ಯಕ್ತಿಗಳಾಗಿದ್ದಾರೆ. ಸಮಾಜದ ಕಟ್ಟ ಕಡೆಯ ವರ್ಗದವರ ಬಗ್ಗೆಯೂ ಅವರಿಗೆ ಸಹಾನುಭೂತಿಯಿದೆ. ಮಾನವೀಯ ಅನುಕಂಪ ಮತ್ತು ಮೌಲ್ಯಗಳ ಕುರಿತು ಗಾಂಭೀರ್ಯದಿಂದ ಹೇಳುವ ಅವರ ಮಾತುಗಳಿಂದ ನನಗೆ ತಿಳಿದು ಬರುವುದೇನೆಂದರೆ ಅವರಿಗೆ ಜನಸಾಮಾನ್ಯರೊಂದಿಗೆ ನಿಕಟ ಸಂಬಂಧವಿದೆ. ಜನಸಾಮಾನ್ಯರಿಂದ ದೂರವಿರುವ ಧಾರ್ಮಿಕ ಹಾಗೂ ರಾಜಕೀಯ ನೇತಾರರಿಂದ ಅವರ ವ್ಯಕ್ತಿತ್ವ ವ್ಯತಿರಿಕ್ತವಾಗಿದೆ.

* Phropsor Heribert Hirte ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಮಾಮ್ ಜಮಾಅತ್ ಅಹಮದಿಯಾ ಅವರು ತನ್ನ ಜಮಾಅತ್ತನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಮಟ್ಟದಲ್ಲಿ ಸಜ್ಜುಗೊಳಿಸಿ ಜಮಾಅತ್ ಅಹಮದಿಯಾವನ್ನು ಇತರ ಎಲ್ಲಾ ಧಾರ್ಮಿಕ ಜಮಾಅತ್ತುಗಳ ಮೇಲೆ ಉನ್ನತಿ ಸಾಧಿಸುವಂತೆ ಮಾಡಿದ್ದಾರೆ. ಇಂತಹ ಜಮಾಅತ್ತಿನ ಜನರು ಶಿಕ್ಷಣದ ಮೇಲೆ ಇಷ್ಟೊಂದು ಆಸಕ್ತಿ ವಹಿಸಿದರೆ ಅವರು ಅಂಧವಿಶ್ವಾಸದಿಂದಿರಲು ಸಾಧ್ಯವೇ? ಆದುದರಿಂದ ಧಾರ್ಮಿಕ ಕ್ಷೇತ್ರಗಳಲ್ಲಿ ಇಂತಹ ಗುರಿ ಹೊಂದಿರುವ ನೇತಾರರನ್ನು ಕಂಡು ನನಗೆ ತುಂಬಾ ಸಂತೋಷವಗಿದೆ.

* ಸಂಸತ್ ಸದಸ್ಯರಾದ Axel Knoerig ಸಾಹಿಬ್, ಅವರು ಹೇಳಿದರು. ಇಂದಿನ ಕಾಲದ ನೇತಾರರು ಜನಸಾಮಾನ್ಯ ಪ್ರಜೆಗಳ ಕಷ್ಟಸುಖಗಳಿಂದ ತುಂಬಾ ದೂರವಾಗಿದ್ದಾರೆ. ಅವರ ಸಮಸ್ಯೆಗಳನ್ನು ಹಾಗೂ ಕಷ್ಟಗಳನ್ನು ಕೇವಲ ವಿವರಿಸಬಲ್ಲರು. ಆದರೆ ನಿಜವಾದ ಕಾಳಜಿಯಾಗಲಿ, ಮಾನವೀಯತೆಯಾಗಲೀ ಅವರಲ್ಲಿ ಇಲ್ಲ. ನಾನು ಮನಗಂಡ ಸಂತೋಷದ ವಿಷಯವೇನೆಂದರೆ ಇಮಾಮ್ ಜಮಾಅತ್ ಅಹ್ಮದಿಯಾ ಅವರ ಭಾಷಣ ಜನಸಾಮಾನ್ಯರೊಂದಿಗೆ ಇರುವ ಅವರ ನಿಕಟ ಸಂಬಂಧವನ್ನು ಪ್ರತಿಬಿಂಬಿಸುವಂತಿತ್ತು. ಅವರು ನಿಜವಾದ ಕಳಕಳಿ, ವ್ಯಕ್ತಿಗತ ಪ್ರೀತಿ ಮತ್ತು ಅನುಕಂಪ ಹೊಂದಿದವರಾಗಿದ್ದಾರೆ. ನಾನು ಹೋಗಿ ಇದೇ ಭಾಷಣವನ್ನು ಮತ್ತೊಮ್ಮೆ ಕೇಳುವೆನು. ನಾನು ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಅನುಸರಿಸುವೆನು.

* Filliz Polat ಸಾಹಿಬ, ಸಂಸತ್ ಸದಸ್ಯೆ ಹೇಳುತ್ತಾರೆ. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಸುಸಂಸ್ಕೃತ ಸಂಘಟನೆಯ ಕುರಿತು ತುಂಬಾ ಒಳ್ಳೆಯ ರೀತಿಯಲ್ಲಿ ಬೆಳಕು ಚೆಲ್ಲಿದ್ದಾರೆ. ಕಾರ್ಯಕ್ರಮ ಆದ ನಂತರ ನನಗೆ ಅವರೊಂದಿಗೆ ಮಾತನಾಡುವ ಸಂದರ್ಭ ಒದಗಿ ಬಂದಾಗ ನಾನು ಅವರಿಗೆ ಪರಿಸರ ಮಾಲಿನ್ಯದ ಬಗ್ಗೆ ಕೇಳಿದಾಗ ಅವರು ಹೇಳಿದರು – ಇದೊಂದು ಜಾಗತಿಕ ಸಮಸ್ಯೆಯಾಗಿದೆ. ಎಲ್ಲಿಯವರೆಗೆ ಎಲ್ಲಾ ದೇಶಗಳು ಸೇರಿ ಐಕ್ಯಮತದಿಂದ ಪ್ರಯತ್ನ ಮಾಡುವುದಿಲ್ಲವೋ ಅದರ ಸಕರಾತ್ಮಕ ಪರಿಣಾಮ ಕಾಣಲು ಸಾಧ್ಯವಾಗಲಿಕ್ಕಿಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ಒಂದು ದೇಶದ ಪ್ರಯತ್ನದಿಂದ ಸಾಧ್ಯವಾಗವುದಿಲ್ಲ. ನನಗೆ ಮಾನವೀಯ

ಸಮಸ್ಯೆಗಳ ಬಗ್ಗೆ ಅವರಿಗಿರುವ ಕಾಳಜಿಯನ್ನು ನೋಡಿ ತುಂಬಾ ಸಂತೋಷವಾಯಿತು.

* Sabine Leidig ಸಾಹಿಬ, ಸಂಸತ್ ಸದಸ್ಯರು, ಹೇಳುತ್ತಾರೆ. ನನಗೆ ಯಾವುದೇ ಧರ್ಮದೊಂದಿಗೆ ಸಂಬಂಧವಿಲ್ಲ. ಆದರೆ ಓರ್ವ ಧಾರ್ಮಿಕ ಮುಖಂಡರೆಂಬ ನೆಲೆಯಲ್ಲಿ ಇಮಾಮ್ ಜಮಾಅತ್ ಅಹಮದಿಯಾ ಅವರು ಮುಂಬರುವ ಮಾನವ ಕುಲದ ಅಪಾಯಗಳನ್ನು ಮುಂಚಿತವಾಗಿ ಗ್ರಹಿಸಿಕೊಂಡು ನಮ್ಮನ್ನು ಎಚ್ಚರಿಸಿದ್ದನ್ನು ಕಂಡು ನಾನು ತುಂಬಾ ಪ್ರಭಾವಿತನಾಗಿದ್ದೇನೆ. ನನ್ನ ಬಯಕೆಯೇನೆಂದರೆ ಈ ಸಂದೇಶ ಸಾರ್ವತ್ರಿಕಗೊಳ್ಳಬೇಕು. ಅದರಿಂದ ಮನುಷ್ಯರಲ್ಲಿ ಜಾಗೃತಿ ಉಂಟಾಗಬಹುದು. ಇಂದು His holiness ನೀಡಿರುವಂತಹ ಸಂದೇಶವು ನನ್ನ ಮನಮುಟ್ಟಿದೆ ಮತ್ತು ತುಂಬಾ ಪ್ರಭಾವಿತನನ್ನಾಗಿ ಮಾಡಿದೆ. ಏಕೆಂದರೆ ಅವರು ಶಾಂತಿಯ ಸಂದೇಶದ ಜೊತೆ ಜೊತೆಯಲ್ಲಿ ಮಕ್ಕಳ ವಿಷಯವಾಗಿ ಮಾತನಾಡಿದ್ದಾರೆ. ಅಂದರೆ ಆ ಮಕ್ಕಳ ಬಗ್ಗೆ ಚಿಂತನೆಯನ್ನು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಪರಮಾಣು ಆಯುಧಗಳ ಅಪಾಯಗಳಿಂದ ನಮ್ಮನ್ನು ಎಚ್ಚರಿಸಿದ್ದಾರೆ. ಖಲೀಫರು ಕೇವಲ ಇಂದಿನ ಜನಾಂಗದೊಂದಿಗೆ ಮಾತ್ರ ಪ್ರೀತಿ ಹೊಂದಿಲ್ಲ. ಬದಲಾಗಿ ಮುಂಬರುವ ಪೀಳಿಗೆಗಳೊಂದಿಗೆಯೂ ತಮ್ಮ ಪ್ರೀತಿ ಮತ್ತು ಚಿಂತೆಯನ್ನು ವ್ಯಕ್ತಪಡಿಸಿದ್ದಾರೆ. ಇಂದು ನನಗೆ ಇಸ್ಲಾಮ್ ಧರ್ಮದ ಕುರಿತು – ವಿಶೇಷವಾಗಿ ಇಸ್ಲಾಮ್ ಧರ್ಮದಲ್ಲಿ ಮಹಿಳೆಗಿರುವ ಸ್ಥಾನಮಾನದ ಕುರಿತು – ಖಲಿಫರು ಹೇಳಿದ ಮಾತುಗಳು ಸುಸ್ಪಷ್ಟವಾಗಿದ್ದವು.

* Nahawandi ಸಾಹಿಬ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಈ ಸಂಬೋಧನೆ ಯೂರೋಪಿನಾದ್ಯಂತ ಪ್ರಚಾರಗೊಳಿಸಿದರೆ ಇಸ್ಲಾಮಿನ ಬಗ್ಗೆ ಇರುವ ಆತಂಕಗಳು ದೂರವಾಗಬಹುದು ಮತ್ತು ಏಕಮುಖವಾಗಿ ಹೊಂದಿರುವ ನಕಾರಾತ್ಮಕ ಭಾವನೆಗಳು ದೂರವಾಗಬಹುದು.

* Axel Knohrig ಸಾಹಿಬ್, ಸಂಸತ್ ಸದಸ್ಯರು ತಮ್ಮ ಅನಿಸಿಕೆಗಳನ್ನು ವಿವರಿಸುತ್ತಾ ಹೇಳುತ್ತಾರೆ. ಇಂದು ಖಲಿಫರು ಮಾಡಿದ ಭಾಷಣವು ನನಗೆ ತುಂಬಾ ಮೆಚ್ಚುಗೆಯಾಗಿದೆ. ಏಕೆಂದರೆ ಅವರು ಲೋಕದಲ್ಲಿ ಶಾಂತಿ ಹರಡುವ ಮಾತನ್ನಾಡಿದ್ದಾರೆ. ಅದಲ್ಲದೇ ಈ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಗಿರುವ ಜವಾಬ್ದಾರಿಯ ಕುರಿತು ತಿಳಿಸಿದ್ದಾರೆ. ಖಲೀಫರು ಇಂದು ನೀಡಿದ ಸಂದೇಶದಲ್ಲಿ ಅವರ ವ್ಯಕ್ತಿತ್ವವನ್ನು ಗುರಿತಿಸಬಹುದಾಗಿದೆ. ಎಲ್ಲಾ ಜನರು ಈ ಸಂದೇಶವನ್ನು ಗ್ರಹಿಸಿಕೊಂಡರೆ ನಿಶ್ಚಯವಾಗಿಯೂ ಶಾಂತಿ ಸ್ಥಾಪನೆಗೊಳ್ಳುವುದು. ಖಲೀಫರು ಹೇಳಿದ ಇನ್ನೊಂದು ವಿಶೇಷವಾದ ಮಾತು – ವಿವಿಧ ಧರ್ಮಗಳು ಮತ್ತು ಸಂಸ್ಕೃತಿಗಳು ಹೇಗೆ ಪರಸ್ಪರ ಶಾಂತಿಯಿಂದ ಇರಬಹುದಾಗಿದೆ ಎಂಬುದಾಗಿದೆ. ಅವರು ಹೇಳಿದ ಎಲ್ಲಾ ಮಾತುಗಳಿಗೆ ನಾನು ಒಬ್ಬ ಕ್ರೈಸ್ತನಾಗಿಯೂ ಸಹಮತ ಹೊಂದಿದ್ದೇನೆ.

* Professor Christoph Gultman ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ. ನನಗೆ ಇಂದಿನ ಕಾರ್ಯಕ್ರಮವು ತುಂಬಾ ಮೆಚ್ಚುಗೆಯಾಗಿದೆ. His holiness ಅವರ ಸಂಬೋಧನೆಯಿಂದ ನನಗೆ ಬಹಳಷ್ಟು ಕಲಿಯಲು ಸಾಧ್ಯವಾಗಿದೆ. ಖುರ್‌ಆನಿನ ಹಲವು ಪುರಾವೆಗಳನ್ನು ಜೊತೆಯಲ್ಲಿಯೇ ನಾನು ಟಿಪ್ಪಣಿ ಮಾಡಿ ಇಟ್ಟಿದ್ದೇನೆ. ಅದನ್ನು ನಾನು ಮನೆಗೆ ಹೋಗಿ ಮತ್ತೊಮ್ಮೆ ಓದಿ ಹೇಳುವೆನು. ನನಗೆ ಖಲೀಫರು ಶಾಂತಿಯ ಸಂದೇಶವನ್ನು ಬಿತ್ತರಿಸುವ ಪರಿ ನೋಡಿ ತುಂಬಾ ಸಂತೋಷವಾಗಿದೆ.

* ಓರ್ವ ಕ್ರೈಸ್ತ ಅತಿಥಿಗಳು ಹೇಳಿದರು. ನನಗೆ ಪ್ರಥಮ ಬಾರಿಗೆ His holiness ಅವರ ಸಂಬೋಧನೆ ಕೇಳುವ ಸಂದರ್ಭ ಒದಗಿ ಬಂದಿದೆ. ಇದಕ್ಕಿಂತ ಮುಂಚೆ ನಾನು ಎಂದೂ ಕೇಳಿರಲಿಲ್ಲ. ಇಸ್ಲಾಮ್ ಧರ್ಮವು ಶಾಂತಿಯನ್ನು ಮತ್ತು ಶಾಂತಿಯ ಸ್ಥಾಪನೆಯ ಕುರಿತು ಅಷ್ಟೊಂದು ಪ್ರಾಮುಖ್ಯತೆ ನೀಡುತ್ತದೆ ಎಂದು ತಿಳಿದಿರಲಿಲ್ಲ. Holiness ಅವರ ಭಾಷಣವನ್ನು ಆಲಿಸಲು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಇಂದು ಸಹ ಭಾಗವಹಿಸಿದ್ದು ನೋಡಿ ತುಂಬಾ ಸಂತೋಷವಾಗಿದೆ. ಅದೇ ರೀತಿ ಯಹೂದಿ ರಬಿ ಮತ್ತು ಇತರ ಮುಸ್ಲಿಮ್ ಪಂಥಗಳ ಜನರನ್ನು ಸಹ ಇಲ್ಲಿ ಕಾಣುವಂತಾಗಿದೆ.

* ಓರ್ವ ಅತಿಥಿಗಳು ತಮ್ಮ ಅನಿಸಿಕೆಗಳನ್ನು ವಿವರಿಸುತ್ತಾ ಹೀಗೆ ಹೇಳಿದರು. ಇಂದು ನನಗೆ ಅತ್ಯಂತ ಜಾಣ್ಮೆಯುಳ್ಳ ವ್ಯಕ್ತಿಯ ಭಾಷಣವನ್ನು ಕೇಳುವ ಅವಕಾಶ ದೊರೆತಿದೆ. ಅವರು ತಮ್ಮ ಭಾಷಣದಲ್ಲಿ ಪ್ರತಿಯೊಬ್ಬ ವ್ಯಕ್ತಿ ಶಾಂತಿ ಸ್ಥಾಪನೆ ಹೇಗೆ ಮಾಡಬಹುದು ಎಂಬುದರ ಕುರಿತು ಅವರಿಗಿರುವ ಜವಾಬ್ದಾರಿಯ ಕಡೆ ಗಮನಹರಿಸಿದ್ದಾರೆ. His holiness ಜನರನ್ನು ಅಂಧಕಾರದಿಂದ ಪ್ರಕಾಶದೆಡೆಗೆ ಆಹ್ವಾನಿಸುತ್ತಾರೆ. ಅವರು ತುಂಬಾ ಸರಳವಾದ ಪದಗಳೊಂದಿಗೆ ಸ್ಪಷ್ಟಪಡಿಸಿದರು. ಎಲ್ಲಾ ಮನುಷ್ಯರು ಶಾಂತಿ, ಪ್ರೀತಿ ಮತ್ತು ಐಕ್ಯಮತ್ಯದಿಂದರಲು ಹೇಗೆ ಸಾಧ್ಯವಾಗಬಹುದು ಎಂದು. ಅದಕ್ಕಾಗಿ ಅವಶ್ಯವಿರುವ ಮಾತೇನೆಂದರೆ ಒಬ್ಬರು ಇನ್ನೊಬ್ಬರನ್ನು ಗೌರವಿಸಬೇಕು. ಈ ಮಾತನ್ನು ಅವರು ಚೆನ್ನಾಗಿ ವಿವರಿಸಿದ್ದಾರೆ. ಲೋಕದಲ್ಲಿ ಎಲ್ಲಾ ವಸ್ತುಗಳು ಬೇಕಾದ ಪ್ರಮಾಣದಲ್ಲಿ ಉಪಸ್ಥಿತವಿವೆ. ಅವು ಎಲ್ಲರಿಗೂ ಸಾಕಾಗಬಹುದು. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡುವುದರಲ್ಲೇ ನಮ್ಮ ವಿಜಯವು ಅವಲಂಭಿತವಾಗಿದೆ.

* ಓರ್ವ ಮಹಿಳೆಯು ಹೇಳುತ್ತಾಳೆ. ಈ ವ್ಯಕ್ತಿ His holiness ಏಕೆ ಆಗಿದ್ದಾರೆ ಎಂಬುದು ಇವರು ಅತ್ಯಂತ ಪ್ರೀತಿ ಹಾಗೂ ಅನುಕಂಪ ಹೊಂದಿದ ನೇತಾರರಾಗಿದ್ದಾರೆ ಎಂಬುದರಿಂದ ಸ್ಪಷ್ಟವಾಗಿದೆ. ಅವರ ಸಂದೇಶ ಬಹುಸ್ಪಷ್ಟವಾಗಿದೆ. ಅವರು ಪ್ರತಿಯೊಬ್ಬರಿಗಿರುವ ಜವಾಬ್ದಾರಿಗಳ ಕುರಿತು ಗಮನ ಸೆಳೆಯುತ್ತಿದ್ದಾರೆ. ಇದು ಒಬ್ಬ ನೇತಾರರಿಗಿರುವ ಬಹುಮುಖ್ಯ ಗುಣವಾಗಿದೆ. ಓರ್ವ ಅತಿಥಿ ತನ್ನ ಅನಿಸಿಕೆಗಳನ್ನು ಹೀಗೆ ಹೇಳಿದರು. His holiness ಹಲವು ಮುಖ್ಯ ಮಾತುಗಳ ಕಡೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಪ್ರಪ್ರಥಮವಾಗಿ ಅವರು ಹೇಳಿದ ಮಾತೆಂದರೆ ಇಂದಿನ ಸಮಾಜ ಧರ್ಮಕ್ಕೆ ಪ್ರಾಮುಖ್ಯತೆ ನೀಡುತ್ತಿಲ್ಲ ಮತ್ತು ಧರ್ಮವನ್ನು ನಕರಾತ್ಮಕ ದೃಷ್ಟಿಯಿಂದ ನೋಡುತ್ತಿದೆ. ಈ ಮಾತು ಕ್ರೈಸ್ತರಾದ ನಮಗೂ ಸರಿಯೆನಿಸುತ್ತದೆ. ಅದಲ್ಲದೆ ಖಲೀಫರ ಭಾಷಣದಲ್ಲಿ ನನಗೆ ಪ್ರಾಮುಖ್ಯವೆನಿಸಿದ ಮಾತೆಂದರೆ ಅವರು ಶಿಕ್ಷಣಕ್ಕೆ ನೀಡಿದ ಮಹತ್ವದ ಕುರಿತಾಗಿದೆ. ಆ ಪೈಕಿ ಅಹ್ಮಯಾ ಮುಸ್ಲಿಮ್ ಜಮಾಅತ್ ಸ್ವಯಂ ಒಂದು ಮಾದರಿಯಾಗಿದೆ. ಏಕೆಂದರೆ ನಮ್ಮ ಪವಿತ್ರ ಗ್ರಂಥ ನಮಗೆ ಎಂತಹ ಶಿಕ್ಷಣ ನೀಡುತ್ತಿದೆ ಎಂಬುದನ್ನು ಗ್ರಹಿಸಿಕೊಂಡರೆ ಹಲವು ಸಮಸ್ಯೆಗಳಿಂದ ಮುಕ್ತಿ ಪಡೆಯಬಹುದಾಗಿದೆ.

* ಓರ್ವ ಅತಿಥಿ ಹೇಳಿದರು. ಖಲೀಫರು ತಮ್ಮ ಭಾಷಣದಲ್ಲಿ ಯಾವ ಮೌಲ್ಯಗಳ ಕುರಿತು ಮಾತನಾಡಬಹುದು ಎಂಬುದರ ಬಗ್ಗೆ ನನಗೆ ಕುತೂಹಲವಿತ್ತು. ಅವರು ನನ್ನ ಯೋಚನೆಗಳ ಅನುಸಾರವೇ ಮಾತನಾಡಿದ್ದಾರೆ. ನಾನು ಅವರ ಮಾತುಗಳನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಖಲೀಫರ ವ್ಯಕ್ತಿತ್ವವು ಅತ್ಯಂತ ಗಾಂಭೀರ್ಯವುಳ್ಳದ್ದಾಗಿದೆ. ಖಲಿಫರ ಒಂದು ಮಾತು ನನಗೆ ಅತ್ಯಂತ ಮೆಚ್ಚುಗೆಗೆ ಪಾತ್ರವಾಗಿದ್ದು ಯಾವುದೆಂದರೆ ಅವರು ಹೇಳಿದರು. ಒಬ್ಬನಿಗೆ ತನ್ನ ಧರ್ಮದ ಶಿಕ್ಷಣದ ಕುರಿತು ಅರಿವು ಇದೆಯಾದರೂ ಅದರ ಪ್ರಕಾರ ನಡೆದುಕೊಳ್ಳದಿದ್ದರೆ ಯಾವ ಪ್ರಯೋಜನವು ಇಲ್ಲ. ಅಸಲು ವಿಷಯವೇನೆಂದರೆ ಮನುಷ್ಯನು ತನ್ನ ನಡವಳಿಕೆಯ ಮೂಲಕ ತನ್ನ ಉತ್ತಮ ನೈತಿಕತೆಯನ್ನು ಪ್ರದರ್ಶಿಸಬೇಕು.

* ಓರ್ವ ಅತಿಥಿವರ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ನನಗೆ ಈಗಷ್ಟೇ ಖಲೀಫರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ನಾನು ಅದರಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಇಂತಹ ಕಾರ್ಯಕ್ರಮವೊಂದು ಈ ಸ್ಥಳದಲ್ಲಿ ನಿಯೋಜಿಸಿದ್ದಕ್ಕೆ ತುಂಬಾ ಕೃತಜ್ಞನಾಗಿದ್ದೇನೆ. ಇಂದಿನ ಭೇಟಿಯ ಮೊದಲು ನಾನು ತುಂಬಾ ಭಯಭೀತನಾಗಿದ್ದೆ ಮತ್ತು ಚಿಂತೆಗೆ ಒಳಗಾಗಿದ್ದೆ. ಏಕೆಂದರೆ ಓರ್ವ ಖಲೀಫರನ್ನು ಹೇಗೆ ಭೇಟಿಯಾಗಬಹುದು ಎಂಬ ಜ್ಞಾನ ನನಗಿರಲಿಲ್ಲ. ಆದರೆ ಇಂದು ಅವರೊಂದಿಗೆ ಭೇಟಿಯಾಯಿತು. ತಕ್ಷಣ ನನಗೆ ನೆಮ್ಮದಿ ದೊರೆಯಿತು. ನಿಶ್ಚಯವಾಗಿಯೂ ಇದು ಖಲೀಫರ ಪವಾಡವೇ ಆಗಿದೆ. ಅವರ ಇಂದಿನ ಭಾಷಣದಲ್ಲಿ ನನಗೆ ತುಂಬಾ ಮೆಚ್ಚುಗೆಯಾದ ಮಾತೆಂದರೆ ಇಸ್ಲಾಮ್ ಧರ್ಮದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿದ್ದು. ಅದರೊಂದಿಗೆ ಅವರು ನೀಡಿದ ಶಾಂತಿಯ ಸಂದೇಶವು ಅತ್ಯಂತ ಮುಖ್ಯವಾದುದಾಗಿತ್ತು.

* ಓರ್ವ ಅತಿಥಿ ಹಾಗೂ ಸಂಸತ್ ಸದಸ್ಯರು ಹೇಳುತ್ತಾರೆ: ನನಗೆ ಈ ಕಾರ್ಯಕ್ರಮವು ಅತ್ಯಂತ ಪ್ರಯೋಜನಕಾರಿಯಾಗಿತ್ತು. His Holiness ಅತ್ಯಂತ ಉತ್ತಮ ರೀತಿಯಲ್ಲಿ ದ್ವೇಷಗಳನ್ನು ತಳ್ಳಿಹಾಕಿದರು ಮತ್ತು ಜನರಿಗೆ ಮಾರ್ಗದರ್ಶನವಾಗುವಂತಹ ವಿಷಯಗಳ ಕುರಿತು ಮಾತನಾಡಿದರು. ನಿಶ್ಚಯವಾಗಿಯೂ ಹಲವು ಜನರಿಗೆ ಅದರ ಪ್ರಯೋಜನವಾಗಿರಬಹುದು. ಖಲೀಫರಿಗೆ ಇಸ್ಲಾಮ್ ಧರ್ಮದಲ್ಲಿ ಶಾಂತಿಗಿರುವ ಮಹತ್ವದ ಕುರಿತು ಉಪಸ್ಥಿತರ ಮೇಲೆ ನಿಷ್ಪಷ್ಟಗೊಳಿಸುವುದು ಅನಿವಾರ್ಯವಾಗಿತ್ತು.

* ಓರ್ವ ಮಹಿಳೆಯು ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ಖಲೀಫರ ಮೇಲೆ ನನ್ನ ಮೊದಲ ದೃಷ್ಟಿ ಬಿದ್ದಾಗ ನಾನು ಅಚ್ಚರಿಗೊಂಡೆ. ಆದರೆ ಅದರ ಜೊತೆಯಲ್ಲಿ ಒಂದು ಗೌರವ ಭಾವನೆಯು ಇತ್ತು. ನನಗೆ ಇಸ್ಲಾಮ್ ಧರ್ಮದ ಕುರಿತು ಮೊದಲಿನಿಂದಲೇ ಆಸಕ್ತಿ ಇತ್ತು. ಇಂದಿನ ಭಾಷಣದಿಂದ ಒಂದು ಮಾತು ಸ್ಪಷ್ಟವಾಗಿದ್ದೇನೆಂದರೆ ನನಗೆ ಇನ್ನೂ ಇಸ್ಲಾಮ್ ಧರ್ಮದ ಕುರಿತು ಬಹಳಷ್ಟು ಕಲಿಯಬೇಕಾಗಿದೆ. ಜನರಿಂದ ದ್ವೇಷ ಭಾವನೆಗಳನ್ನು ದೂರ ಮಾಡಲು ಈ ಮಾತು ಅವಶ್ಯವಾಗಿದೆ. ವಾಸ್ತವದಲ್ಲಿ ಇಸ್ಲಾಮ್ ಧರ್ಮವು ಶಾಂತಿಯ ಧರ್ಮವಾಗಿದೆ. ದ್ವೇಷ ಹೊಂದಿದವರ ದ್ವೇಷಗಳನ್ನು ದೂರ ಮಾಡಲು ಇಂದಿನ ಭಾಷಣ ಅವಶ್ಯವಾಗಿತ್ತು.

ಓರ್ವ ಅತಿಥಿ ತಮ್ಮ ಅನಿಸಿಕೆಗಳನ್ನು ವಿವರಿಸುತ್ತಾ ಹೇಳುತ್ತಾರೆ: ಹಾಗೆ ನೋಡಿದರೆ ಖಲೀಫರ ಎಲ್ಲಾ ಮಾತುಗಳು ಮೆಚ್ಚುವಂತಹದ್ದಾಗಿದ್ದವು. ಅದರಲ್ಲಿ ಬಹುಪ್ರಿಯವಾದ ಮಾತೆಂದರೆ ಶಾಂತಿಪೂರ್ಣ ಶಿಕ್ಷಣದ ಕುರಿತಾಗಿತ್ತು. ಆದರೆ ನನ್ನನ್ನು ಅಚ್ಚರಿಗೊಳಿಸಿದ ಒಂದು ವಿಷಯವೆಂದರೆ ಮನುಷ್ಯನು ಸೇಡು ತೀರಿಸಿಕೊಳ್ಳಬೇಕೆಂಬುದು ಅನಿವಾರ್ಯವಲ್ಲ. ಬದಲಾಗಿ ಕ್ಷಮಿಸಿಯೂ ಪ್ರಯೋಜನ ಪಡೆಯಬಹುದು.

* ಓರ್ವ ಅತಿಥಿ – ARNO-TAPPE ಸಾಹೇಬರು, ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವಿವರಿಸಿದರು: ನಾನು ಮೊದಲು ಸಹಾ ಖಲೀಫರ ಭಾಷಣವನ್ನು ಕೇಳಿರುತ್ತೇನೆ. ಆಗಲೂ ಅವರ ಮಾತುಗಳ ಪ್ರಭಾವ ನನ್ನ ಮೇಲೆ ಆಗಿತ್ತು. ಈಗಲೂ ಸಹ ಅವರ ಮಾತುಗಳು ಒಂದು ವಿಶೇಷವಾದ ಪ್ರಭಾವ ಬೀರಿದೆ. ಖಲೀಫರ ಭಾಷಣವು ಸರ್ವತ್ರ ಚರ್ಚೆಯ ವಿಷಯವಾಗಬಹುದು. ಆದುದರಿಂದ ನನ್ನ ಸಲಹೆ ಏನೆಂದರೆ ಖಲಿಫರ ಭಾಷಣವನ್ನು ಆದಷ್ಟು ಶೀಘ್ರದಲ್ಲಿ ಮುದ್ರಿಸಿ ಎಲ್ಲಾ ಅತಿಥಿಗಳಿಗೆ, ಸಂಸತ್ ಸದಸ್ಯರಿಗೆ ಹಾಗೂ ಇತರರಿಗೆ ಕೊಡಬಹುದಾಗಿದೆ. ಆ ಮೂಲಕ ಖಲೀಫರ ಸಂದೇಶವನ್ನು ನೇರವಾಗಿ ತಲುಪಿಸಿದಂತಾಗುತ್ತದೆ.

**ಅಕ್ಟೋಬರ್ 23, 2019 (ಬುಧವಾರ)**

ಹುಝೂರ್ ಮುಂಜಾನೆ 6.45 ಗಂಟೆಗೆ ಮಸ್ಜಿದ್ ಖದೀಜಕ್ಕೆ ಆಗಮಿಸಿ ಫಜರ್ ನಮಾಜನ್ನು ನಿರ್ವಹಿಸಿಕೊಟ್ಟರು. ನಮಾಜ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಹುಝೂರ್ ಕಛೇರಿಯ ಅಂಚೆಗಳನ್ನು, ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಹಾಗೂ ನಿರ್ದೇಶನಗಳನ್ನು ನೀಡಿದರು.

DEUTSCHlAND Radio ದ ಓರ್ವ ಮಹಿಳಾ ಜರ್ನಲಿಸ್ಟ್ ಹುಝೂರರ ಸಂದರ್ಶನ ಪಡೆಯಲು ಆಗಮಿಸಿದ್ದರು. ಅಲ್ಲದೆ ರಾಯಭಾರಿಯಾದ BERRESHIM ಸಾಹಿಬ್ ಅವರು Director of the Department, Religion and politics, ministry of foreign affairs ಆಗಿದ್ದರು. ಅವರು ಸಹ ಹುಝೂರರೊಂದಿಗೆ ಭೇಟಿಯಾಗಲು ಆಗಮಿಸಿದ್ದರು 10.35 ಗಂಟೆಗೆ ಹುಝೂರ್ ತಮ್ಮ ಕಛೇರಿಗೆ ಆಗಮಿಸಿದರು ಮತ್ತು Radio DETSCHIND ಮಹಿಳಾ ಜರ್ನಲಿಸ್ಟ್ ಹುಝೂರ ಸಂದರ್ಶನ ನಡೆಸಿದರು.

ಮಹಿಳಾ ಜರ್ನಲಿಸ್ಟ್ ಹೇಳಿದರು. ನಾನು ನಿನ್ನೆ ತಮ್ಮ ಭಾಷಣ ಕೇಳಿದ್ದೇನೆ. ನನ್ನ ಮೊದಲ ಪ್ರಶ್ನೆಯೇನೆಂದರೆ, ತಾವು ಯೂರೋಪ್‌ನವರ ನಾಸ್ತಿಕತೆಯಲ್ಲಿ ಹೆಚ್ಚಳವಾಗುತ್ತಿರುವ ವಿಷಯದ ಕುರಿತು ಮಾತನಾಡಿದ್ದೀರಿ ಮತ್ತು ಯೂರೋಪಿಯನ್ನರಿಗೆ ಇಸ್ಲಾಮ್ ಅಪಾಯಕಾರಿ ಮತವಲ್ಲ ಎಂದು ತಿಳಿಸಿದ್ದೀರಿ. ಜನರನ್ನು ಧರ್ಮಗಳತ್ತ ಬರಲು ಆಹ್ವಾನಿಸಿದೀರಿ. ಅವರು ಕ್ರೈಸ್ತರಾಗಲಿ, ಯಹೂದರಾಗಲಿ ಅಥವಾ ಯಾವುದೇ ಧರ್ಮದವರಾಗಲಿ, ನಿಮ್ಮ ದೃಷ್ಟಿಯಲ್ಲಿ ನೈತಿಕ ಮೌಲ್ಯಗಳಿಗೆ ನಾಸ್ತಿಕರಿಂದ ಯಾವ ಅಪಾಯವಿದೆ ಎಂದು ಕೇಳಿದರು. ಆಗ ಹುಝೂರ್ ಹೇಳಿದರು. ಎಲ್ಲಾ ಧಾರ್ಮಿಕ ಗ್ರಂಥಗಳು – ಬೈಬಲ್ ಮತ್ತು ಪವಿತ್ರ ಖುರ್‌ಆನ್ ಒಳಗೊಂಡು – ಕೇವಲ ನೈತಿಕ ಮೌಲ್ಯಗಳನ್ನು ವಿವರಿಸುತ್ತವೆ. ಆದರೆ ಆ ಕಡೆ ಯಾರೂ ಗಮನ ಹರಿಸುವುದಿಲ್ಲ. ಉದಾಹರಣೆಗಾಗಿ ಮಾತಾಪಿತರನ್ನು ಮೊದಲಿನ ಹಾಗೆ ಈಗ ಯಾರೂ ಗೌರವಿಸುವುದಿಲ್ಲ ಅಥವಾ ಧಾರ್ಮಿಕ ಗ್ರಂಥಗಳ ಶಿಕ್ಷಣಗಳನ್ನು ಪಾಲಿಸುವುದಿಲ್ಲ. ಅದೇ ರೀತಿ ದಿನನಿತ್ಯದ ಹಲವಾರು ವಿಷಯಗಳಿವೆ. ಅವುಗಳನ್ನು ಪೂರ್ಣ ರೀತಿಯಲ್ಲಿ ಗೌರವಿಸಲಾಗುತ್ತಿಲ್ಲ.

ಹುಝೂರ್ ಅನ್ವರ್ ಹೇಳಿದರು. ನಿಮ್ಮ ವಾರ್ತಾ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿರುತ್ತವೆ. ಮಕ್ಕಳು ತಮ್ಮೊಂದಿಗೆ ಮಾತಾಪಿತರ ವರ್ತನೆ ಸರಿಯಿಲ್ಲ ಎಂದು ಹೇಳುತ್ತಾರೆ. ಆದರೂ ಮಾತಾಪಿತರ ದೃಷ್ಟಿಕೋನ ಇನ್ನೊಂದು ರೀತಿಯದ್ದಾಗಿರುತ್ತದೆ. ಈಗ ಮಾತಾಪಿತರು ಈ ಧ್ವನಿಯನ್ನು ಎತ್ತುತ್ತಿದ್ದಾರೆ. ಮಕ್ಕಳಿಗೆ ಈಗ ನೀಡಲಾಗುತ್ತಿರುವಷ್ಟು ಸ್ವಾತಂತ್ರ್ಯ ನೀಡಬಾರದೆಂದು. ಅದೇ ರೀತಿ ಎಷ್ಟೋ ನೈತಿಕ ಮೌಲ್ಯಗಳಿವೆ. ಅದನ್ನು ಸಮಾಜ ಕಡೆಗಣಿಸುತ್ತಾ ಬಂದಿದೆ. ಆದುದರಿಂದ ನಾನು ಹೇಳುವುದು ಕೆಲವು ನೈತಿಕ ಮೌಲ್ಯಗಳು – ಅದರ ವಿವರ ಧಾರ್ಮಿಕ ಗ್ರಂಥಗಳಲ್ಲಿ ದೊರೆಯುತ್ತದೆ – ಆ ಕಡೆ ಗಮನ ಹರಿಸಲಾಗುತ್ತಿಲ್ಲ.

ಜರ್ನಲಿಸ್ಟ್ ಪ್ರಶ್ನೆ ಕೇಳಿದರು: ತಾವು ಧಾರ್ಮಿಕ ಸ್ವಾತಂತ್ರ್ಯ ಹಾಗೂ ಪರಸ್ಪರ ಸಮಾನತೆಯ ಪ್ರಾಮುಖ್ಯತೆಯ ಕುರಿತು ಮಾತನಾಡಿದ್ದೀರಿ. ಆದರೆ ಹಲವು ಇಸ್ಲಾಮಿ ರಾಷ್ಟ್ರಗಳು ಅಲ್ಪಸಂಖ್ಯಾತರ ಬಗ್ಗೆ ಸಹಿಷ್ಣುತೆ, ಸಮಾನತೆ ತೋರುತ್ತಿಲ್ಲ. ಅಹ್ಮದಿಯಾ ಜಮಾಅತ್ ಸಹ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಯೂರೋಪಿನಲ್ಲಿರುವ ಪ್ರಸಕ್ತ ಧಾರ್ಮಿಕ ಸ್ವಾತಂತ್ರ್ಯ ನಿಮಗೆ ಇನ್ನಷ್ಟು ಪ್ರಗತಿ ಹೊಂದುವ ಅವಕಾಶ ದೊರಕಿಸಿಕೊಡಬಹುದೆ?

ಆಗ ಹುಝೂರ್ ಹೇಳಿದರು. ಯೂರೋಪಿನಲ್ಲಿ ಒಂದು ಸಕಾರಾತ್ಮಕ ಮಾತು ಅವಶ್ಯವಿದೆ. ಅದು ನಿಮಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಅಥವಾ ಧಾರ್ಮಿಕ ವಿಶ್ವಾಸಗಳ ಸ್ವಾತಂತ್ರ್ಯ ನೀಡುತ್ತದೆ. ನಿಶ್ಚಯವಾಗಿಯೂ ಇಲ್ಲಿ ನಾವು ಬಯಸಿದ, ವಿಶ್ವಾಸದ ಮೇಲೆ ನಡೆದುಕೊಳ್ಳಬಹುದು, ಅದನ್ನು ಅಭಿವ್ಯಕ್ತಗೊಳಿಸಬಹುದು. ಆದರೆ ಕೆಲವು ಇಸ್ಲಾಮಿ ರಾಷ್ಟ್ರಗಳಲ್ಲಿ ಆ ಹಕ್ಕುಗಳನ್ನು ನಿರಾಕರಿಸಲಾಗುತ್ತದೆ.

ಹುಝೂರ್ ಹೇಳಿದರು. ಪವಿತ್ರ ಖುರ್‌ಆನ್ ಹೇಳುತ್ತದೆ: ಧರ್ಮದಲ್ಲಿ ಬಲವಂತ ಸಲ್ಲದು. ನಾವು ಸಹ ಅದರ ಮೇಲೆ ವಿಶ್ವಾಸ ಹೊಂದಿದ್ದೇವೆ. ಆದರೆ ಅದರ ಜೊತೆ ಜೊತೆಯಲ್ಲಿ ನಾವು ನಮ್ಮ ವಿಶ್ವಾಸಗಳ ಪ್ರಚಾರ ಮಾಡುತ್ತೇವೆ ಅಥವಾ ಬಹಿರಂಗಪಡಿಸುತ್ತೇವೆ. ಜನರಿಗೆ ಆ ಸಂದೇಶ ಮನವರಿಕೆಯಾದರೆ ಮನ್ನಿಸಬಹುದು. ಇಲ್ಲಿ ಸಾಕಷ್ಟು ಶಿಕ್ಷಣದ ವ್ಯವಸ್ಥೆಯಿದೆ. ಇಲ್ಲಿಯ ಜನರು ಯಾವಾಗಲಾದರೂ ಧರ್ಮದೆಡೆಗೆ ಗಮನಹರಿಸುವವರಾದರೆ ಅವರಿಗೆ ಮನವರಿಕೆಯಾಗಬಹುದು. ಇಸ್ಲಾಮಿ ಶಿಕ್ಷಣಗಳು ಅವರ ಆಧ್ಯಾತ್ಮಿಕ ಉನ್ನತಿ ಮತ್ತು ಧರ್ಮದೆಡೆಗೆ ಮರಳಿ ಬರುವಂತೆ ಮಾಡುವುದು, ಇವು ತಮಗೆ ಹಿತಕಾರಿಯಾಗಿದೆ ಎಂಬುದು. ಜನರ ಲಕ್ಷ್ಯ ಧರ್ಮದೆಡೆಗೆ ಬಂದರೆ ಇಲ್ಲಿ ಇಸ್ಲಾಮ್ ಪ್ರಗತಿ ಸಾಧಿಸುವುದು ನಿಶ್ಚಿತವಾಗಿದೆ ಎಂದು ನಾವು ನಂಬಿದ್ದೇವೆ. ಜರ್ನಲಿಸ್ಟ್ ಪ್ರಶ್ನೆ ಕೇಳಿದರು: ಅಹ್ಮದಿಯರಿಗೆ ತಮ್ಮ ಜಮಾಅತ್ತಿನಿಂದ ಹೊರಗಿನವರೊಂದಿಗೆ ವಿವಾಹವಾಗಲು ಅನುಮತಿ ಇರುವುದಿಲ್ಲ. ಅದನ್ನು ನೀವು ನಂಬುಗೆಯ ಸ್ವಾತಂತ್ರ್ಯ ಎಂದು ಹೇಗೆ ಜೋಡಿಸುವಿರಿ?

ಆಗ ಹುಝೂರ್ ಹೇಳಿದರು. ಈ ಮಾತು ಸಂಪೂರ್ಣ ಸರಿಯಾಗಿದೆ. ವಾಸ್ತವವೇನೆಂದರೆ ಕೆಲವು ಸಮಯ ಸ್ತ್ರೀಯರು ಪುರುಷರ ಅಧೀನದಲ್ಲಿ ಬರುತ್ತಾರೆ. ಆದುದರಿಂದ ನಾವು ಹೇಳುವುದು ಓರ್ವ ಅಹ್ಮದಿ ಹುಡುಗಿ ಜಮಾಅತಿನ ಹೊರಗೆ ವಿವಾಹವಾಗುವುದಾದರೆ ಆ ಹುಡುಗಿ ಮತ್ತು ಸಂತಾನ ಆ ಪುರುಷನ ಅಧೀನಕ್ಕೆ ಹೋಗಬಹುದು. ಇನ್ನೂ ನೋಡುವ ವಿಷಯವೆಂದರೆ ಬೇರೆ ಬೇರೆ ಧರ್ಮಕ್ಕೆ ಸಂಬಂಧಿಸಿದ ಸ್ತ್ರೀ ಪುರುಷರು ವಿವಾಹವಾದರೆ ಭಿನ್ನಮತದ ಕಾರಣ ವೈಮನಸ್ಸು ಉಂಟಾಗಿ ಸಂಸಾರ ಕೆಡುತ್ತದೆ. ಇನ್ನೊಂದೆಡೆ ಕೆಲವು ಹುಡುಗಿಯರು ನನ್ನಂದ ಅನುಮತಿ ಕೇಳುತ್ತಾರೆ. ಆಗ ಅನುಮತಿ ನೀಡಿದ್ದು ಇದೆ. ಅದಲ್ಲದೇ ಅಹ್ಮದಿ ಪುರುಷರೂ ಜಮಾಅತ್ತಿನ ಹೊರಗಿನಿಂದ ವಿವಾಹವಾಗುತ್ತಾರೆ. ಹಲವು ಅಹ್ಮದಿಯರ ಪತ್ನಿಯರು ಕ್ರೈಸ್ತ ಅಥವಾ ಇನ್ನಿತರ ಧರ್ಮಗಳನ್ನು ಅನುಸರಿಸುವವರಾಗಿದ್ದಾರೆ. ಅಂತೂ ನಮ್ಮ ವಿಶ್ವಾಸವೇನೆಂದರೆ ಒಬ್ಬ ಸತ್ಯವಿಶ್ವಾಸಿಗನಿಗೆ ಏಕದೇವನ ಮೇಲೆ ವಿಶ್ವಾಸ ಹೊಂದಿದ, ವಿಗ್ರಹ ಪೂಜೆ ಮಾಡದವರೊಂದಿಗೆ ವಿವಾಹವಾಗಬಹುದು.

ನಿನ್ನೆಯ ಸಮಾರಂಭದಲ್ಲಿ ತನಗೆ ಯಾವ ಅಹ್ಮದಿ ಮಹಿಳೆಯು ಕಂಡು ಬರಲಿಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪತ್ರಕರ್ತೆಯು ಪ್ರಶ್ನಿಸಿದಳು.

ಆಗ ಹುಝೂರರು ಹೇಳಿದರು: ನಿನ್ನೆಯ ಸಮಾರಂಭವು ಹೊರಗಿನ ಜನರಿಗಾಗಿತ್ತು. ಹಲವು ಜನರು ಈ ಸಮಾರಂಭಕ್ಕೆ ಬರಲು ಸಮ್ಮತಿ ಸೂಚಿಸಿದ್ದರು. ಆದರೆ ಅಲ್ಲಿ ಹೆಚ್ಚಿನ ಸ್ಥಳಾವಕಾಶವಿರಲಿಲ್ಲ. ಈ ಸಮಾರಂಭ ಆಯೋಜಿಸಿದವರು ಪುರುಷರಾಗಿದ್ದರು. ಅಲ್ಲವಾದರೆ ನಾವು ಈ ರೀತಿಯ ಸಮಾರಂಭಗಳನ್ನು ಹಮ್ಮಿಕೊಳ್ಳುತ್ತಿರಲಿಲ್ಲ. ಮಹಿಳೆಯರಿಗೂ ಆಸನ ವ್ಯವಸ್ಥೆ ಮಾಡುತ್ತಿದ್ದೆವು. ಅವರು ಸಹ ತಮ್ಮ ಜೊತೆಯಲ್ಲಿ ಅತಿಥಿಗಳನ್ನು ಕರೆ ತರುತ್ತಾರೆ. ಆದರೆ ನಿನ್ನೆಯ ಸಮಾರಂಭದ ಆಹ್ವಾನಿತರಲ್ಲಿ ಅಥವಾ ಆಹ್ವಾನಕ್ಕೆ ಸಮ್ಮತಿಸಿದವರಲ್ಲಿ ಯಾವ ಅಹ್ಮದಿ ಮಹಿಳೆಯರೂ ಅತಿಥಿಗಳಿಗೆ ಕರೆ ಕೊಟ್ಟಿರಲಿಲ್ಲ. ಪುರುಷರು ಮಾತ್ರ ಭಾಗವಹಿಸಿದ್ದರು. ಆ ಕಾರಣವೇ ಅಲ್ಲಿ ಕೆಲವು ಪುರುಷರು ಮಾತ್ರವಿದ್ದರು. ಯಾವ ಅಹ್ಮದಿ ಮಹಿಳೆಯರೂ ಇರಲಿಲ್ಲ. ಅಲ್ಲವಾದರೆ ಸಾಮಾನ್ಯವಾಗಿ ನಮ್ಮ ಮಸೀದಿಗಳ ಸಮಾರಂಭಗಳಲ್ಲಾಗಲಿ ಅಥವಾ ಇತರ ಸಮಾರಂಭಗಳಾಗಲಿ ಸ್ತ್ರೀಯರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಅಹ್ಮದಿ ಮಹಿಳೆಯರ ಮೊದಲ ಸ್ಥಾನ ಮನೆಯಾಗಿದೆ ಎಂದು ನಾನು ಓದಿರುತ್ತೇನೆ – ಪತ್ರಕರ್ತೆ ಕೇಳಿದರು. ಆಗ ಹುಝೂರ್ ವಿವರಿದರು: ಮೊದಲನೆಯ ವಿಷಯವೆಂದರೆ ಇಸ್ಲಾಮ್ ಪುರುಷರಿಗೆ ಮತ್ತು ಸ್ತ್ರೀಯರಿಗೆ ಕರ್ತವ್ಯಗಳನ್ನು ಹಂಚಿಕೊಟ್ಟಿದೆ. ಅದರನ್ವಯ ಆದಾಯ ಗಳಿಸುವ ಹೊಣೆಗಾರಿಕೆ ಪುರುಷರ ಮೇಲಿದೆ. ಸಾಂಪತ್ತಿಕವಾಗಿ ಅವರು ಮನೆಗಳನ್ನು ನಡೆಸುತ್ತಾರೆ. ಸಾಮಾನ್ಯವಾಗಿ ಸ್ತ್ರೀಯರು ಮನೆಯನ್ನು ನೋಡಿಕೊಳ್ಳುತ್ತಾರೆ ಮತ್ತು ಮಕ್ಕಳಿಗೆ ತರಬೇತಿ ನೀಡುತ್ತಾರೆ. ಆದರೆ ಅದರ ಜೊತೆಯಲ್ಲಿ ನಾವು ಮಹಿಳೆಯರಿಗೆ ಶಿಕ್ಷಣ ಪಡೆಯುವ ಹಕ್ಕನ್ನು ನಿರಾಕರಿಸುವುದಿಲ್ಲ. ಮಹಿಳೆಯು ಕಲಿತವಳಾದರೆ ಇಂಜಿನಿಯರ್ ಅಥವಾ ಡಾಕ್ಟರ್ ಅಥವಾ ಶಿಕ್ಷಕಿ ಅಥವಾ ಇನ್ಯಾವುದೇ ವೃತ್ತಿಯಲ್ಲಿ ವಿದ್ಯಾವಂತೆಯಾಗಿದ್ದರೆ ಹೊರಗೆ ಹೋಗಿ ಕಾರ್ಯ ನಿರ್ವಹಿಸುತ್ತಾರೆ. ಆದರೆ ಮನೆಗೆ ಮರಳಿ ಬಂದ ಮೇಲೆ ಅವರು ಮನೆಯನ್ನು ನೋಡಿಕೊಳ್ಳಬೇಕಾಗುತ್ತದೆ. ಅಂತೂ ನಾನು ಮೊದಲೇ ಹೇಳಿದಂತೆ ಇದು ಕರ್ತವ್ಯಗಳ ಹಂಚಿಕೆಯಾಗಿದೆ. ಅದರನ್ವಯ ಪುರುಷರು ಹೊರಗೆ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮಹಿಳೆಯರು ಮನೆಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಆದರೂ ಯಾರೊಬ್ಬ ಮಹಿಳೆ ಯಾವುದೇ ಕ್ಷೇತ್ರದಲ್ಲಿ ವಿಶೇಷವಾದ ಪರಿಣತಿ

ಹೊಂದಿದ್ದಲ್ಲಿ ಅವಳು ಹೊರಗೆ ಹೋಗಿ ಕಾರ್ಯ ಮಾಡಬಹುದಾಗಿದೆ. ಆದರೆ ಅದರ ಜೊತೆಯಲ್ಲಿ ಅವಳು ಮನೆಯನ್ನೂ ನೋಡಿಕೊಳ್ಳಬೇಕಾಗುತ್ತದೆ. ಮಹಿಳೆಯರು ಮನೆಯಲ್ಲಿ ಇರುವುದು ಅಥವಾ ಮನೆಗಳನ್ನು ನೋಡಿಕೊಳ್ಳುವುದು ಎಂದರೆ ಅದರ ಅರ್ಥ ಅವರಿಗೆ ಮನೆಯಿಂದ ಹೊರ ಬರಲು ಅನುಮತಿಯೇ ಇಲ್ಲ ಎಂಬುದು ಖಂಡಿತ ಇಲ್ಲ. ನಮ್ಮ ಮಹಿಳೆಯರದ್ದೂ ಒಂದು ಸಂಘಟನೆಯಿದೆ. ಅದು ಬಹು ಸಕ್ರಿಯವಾಗಿದೆ. ನೀವು ಎಂದಾದರೂ ನಮ್ಮ ಜಲ್ಸ ನೋಡಿದವರಾದರೆ ತಿಳಿದುಕೊಳ್ಳಬಹುದು. ಮಹಿಳೆಯರು ತಮ್ಮ ಸಮಾರಂಭವನ್ನು ತಾವಾಗಿ ಆಯೋಜಿಸಿಕೊಂಡಿರುತ್ತಾರೆ. ಹೀಗೆ ನಮ್ಮ ಜಮಾಅತ್ತಿನಲ್ಲಿ ಅವರು ತುಂಬ ಸಕ್ರಿಯರಾಗಿದ್ದಾರೆ. ಅವರು ಹೊರಗೆ ಹೋಗಿಯೂ ತಮ್ಮ ಸಮಾರಂಭಗಳನ್ನು ಹಮ್ಮಿಕೊಳ್ಳುತ್ತಾರೆ. ಅವರದ್ದು ತಮ್ಮದೇ ಆದ ಒಂದು ಪ್ರತ್ಯೇಕ ವ್ಯವಸ್ಥೆಯಾಗಿರುತ್ತದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿರುತ್ತಾರೆ. ಅದರಲ್ಲಿ ವೈದ್ಯರು, ಶಿಕ್ಷಕರು, ಇಂಜಿನಿಯರು ಆಗಿದ್ದವರು ಹೊರಗೆ ಹೋಗಿ ಕೆಲಸ ನಿರ್ವಹಿಸುತ್ತಾರೆ.

ಮಹಿಳಾ ಪತ್ರಕರ್ತೆ ಕೇಳಿದರು. ಹಾಗಾದರೆ ಸ್ತ್ರೀ ಪುರುಷರ ನಡುವೆ separation (ಪ್ರತ್ಯೇಕತೆ) ಏಕೆ?

ಆಗ ಹುಝೂರ್[ಅ.ಬಿ.ಅ.] ಹೇಳಿದರು. ಏಕೆಂದರೆ ನನ್ನ ಭಾವನೆಯಲ್ಲಿ ಮಹಿಳೆಯರಿಗೆ ಪುರುಷರಿಂದ ಬೇರ್ಪಡಿಸಿ ಅವಕಾಶಗಳನ್ನು ನೀಡಿದರೆ ಅವರು ಇನ್ನೂ ಹೆಚ್ಚಿನ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅವರು ಪುರುಷರಿಂದ ಪ್ರತ್ಯೇಕಗೊಂಡಾಗ ಅವರು ತಮ್ಮ ಕಾರ್ಯದಲ್ಲಿ ಮತ್ತು ಪ್ರಗತಿ ವಿಷಯದಲ್ಲಿ ಸ್ವತಂತ್ರರಾಗಿರುತ್ತಾರೆ. ನೀವು ಒಂದು ದೊಡ್ಡ ಮರದ ಕೆಳಗೆ ಸಣ್ಣದಾದ ಸಸ್ಯವನ್ನು ನೆಟ್ಟರೆ ಅದು ಸರಿಯಾಗಿ ಬೆಳೆಯಲಾಗದು. ಆದುದರಿಂದ ನಮ್ಮ ಭಾವನೆ ಮಹಿಳೆಯರು ಪುರುಷರಿಂದ ಬೇರೆಯಾಗಿ ಕೆಲಸ ನಿರ್ವಹಿಸಿದರೆ ಅವರು ಇನ್ನೂ ಹೆಚ್ಚಿನ ಒಳ್ಳೆಯ ರೀತಿಯಲ್ಲಿ ಪ್ರಗತಿ ಸಾಧಿಸಬಹುದಾಗಿದೆ. ಆದರೆ ಅದರ ಜೊತೆಯಲ್ಲಿ ಪುರುಷರಿಗೆ ಇರುವ ಹಕ್ಕುಗಳಂತೆಯೇ ಮಹಿಳೆಯರ ಹಕ್ಕುಗಳೂ ಇವೆ. ಮಹಿಳೆಯ ಬಳಿ ಖುಲಾ (ವಿಚ್ಛೇದನ) ಹಕ್ಕು ಇದೆ. ಇಸ್ಲಾಮಿನಲ್ಲಿ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕಿದೆ. ಹೀಗೆ ಇನ್ನೂ ಹಲವು ಹಕ್ಕುಗಳಿವೆ. ಅದು ಪಶ್ಚಿಮದಲ್ಲಿ ಕೆಲ ದಶಕಗಳ ಹಿಂದಿನವರೆಗೆ ಮಹಿಳೆಯರಿಗೆ ಇರಲಿಲ್ಲ. ಈಗ ನಿಮಗೆ ಈ ಹಕ್ಕು ದೊರೆತಿದೆ ಎಂದರೆ ನಾವೇ ಮಹಿಳೆಯರ ಹಕ್ಕುಗಳ ಚಾಂಪಯನ್ನರು ಎಂದು ಹೇಳಲಾಗುವುದಿಲ್ಲ. ಬದಲಾಗಿ ಮುಸ್ಲಿಮ್ ಮಹಿಳೆಯರೇ ಈ ಹಕ್ಕುಗಳ ಚಾಂಪಿಯನ್ ಆಗಿದ್ದಾರೆ ಮಹಿಳಾ ಪತ್ರಕರ್ತೆ ಕೇಳಿದರು. ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಇದೆಯೆಂದು ಹೇಳಿದ್ದೀರಿ. ಅದರ ಹಿಂದೆಯೂ ಒಂದು ರಹಸ್ಯವಿದೆ.

ಆಗ ಹುಝೂರ್ ಹೇಳಿದರು. ನೀವು ಹೀಗೆ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳಿ ನನ್ನ ಎಲ್ಲ ಸಮಯ ತೆಗೆದುಕೊಂಡರೆ, ನನಗೆ ತಡವಾಗುತ್ತದೆ.

ಹುಝೂರ್ ಹೇಳಿದರು. ಎಲ್ಲಿಯವರೆಗೆ, ಮಹಿಳೆಯರಿಗೆ ಪುರುಷರಿಗಿಂತ ಅರ್ಧ ಭಾಗ ಆಸ್ತಿಯ ಹಕ್ಕಿನ ಮಾತಿದೆಯೋ ನಾನು ಮೊದಲೇ ತಿಳಿಸಿರುತ್ತೇನೆ. ಆಹಾರ ವ್ಯವಸ್ಥೆಯ ಗಳಿಕೆಯ ಜವಾಬ್ದಾರಿಯೂ ಪುರುಷನ ಮೇಲಿದೆ. ಪುರುಷನು ಗಳಿಸಬೇಕಾಗಿದೆ ಮತ್ತು ಅವನೇ ಖರ್ಚು ವೆಚ್ಚ ನೋಡಿಕೊಳ್ಳಬೇಕಾಗುತ್ತದೆ. ಮಹಿಳೆಯು ಖರ್ಚು ವೆಚ್ಚಕ್ಕೆ ಜವಾಬ್ದಾರಳಲ್ಲ. ಹೀಗೆ ಆಸ್ತಿ ಪಾಲು ಸಿಕ್ಕಿದ್ದೆಲ್ಲ ತನ್ನ ಸ್ವಂತದ್ದಾಗಿರುತ್ತದೆ. ಆ ಹಣದಿಂದ ಮನೆ ಖರ್ಚಿನ ಮೇಲೆ ಅಥವಾ ತನ್ನ ಪತಿಯ ಮೇಲೆ ಅಥವಾ ತನ್ನ ಮಕ್ಕಳ ಮೇಲೆ ಖರ್ಚು ಮಾಡುವುದು ಕರ್ತವ್ಯವಲ್ಲ. ಏಕೆಂದರೆ ಮನೆ ಖರ್ಚಿನ ಜವಾಬ್ದಾರಿ ಪುರುಷನ ಮೇಲಿದೆ. ಆದುದರಿಂದ ಮಹಿಳೆಯರಿಗೆ ಸಿಕ್ಕಿದ ಆಸ್ತಿಯಲ್ಲಿ ಅವನು ತನ್ನ ಹೆಂಡತಿಯ ಮೇಲು ಖರ್ಚು ಮಾಡಬೇಕಾಗುತ್ತದೆ. ಮತ್ತು ತನ್ನ ಮಕ್ಕಳ ಮೇಲೂ ಖರ್ಚು ಮಾಡಬೇಕಾಗುತ್ತದೆ. ಅದರ ಹಿಂದೆ ಈ ರಹಸ್ಯ ಅಡಗಿರುತ್ತದೆ.

ಮಹಿಳಾ ಪತ್ರಕರ್ತೆ ಉತ್ತರ ಕೇಳಿ ಹುಝೂರರಿಗೆ ಕೃತಜ್ಞತೆ ಸಲ್ಲಿಸಿದರು. ಮತ್ತು ಅಂತಿಮ ಪ್ರಶ್ನೆ ಕೇಳುತ್ತಾ ಹೇಳಿದರು. ನಿಮಗಿಂತ ಹಿಂದಿನ ಖಲೀಫರು ಹೇಳಿದ್ದರು. ಜರ್ಮನಿಯಲ್ಲಿ ಒಂದು ನೂರು ಮಸೀದಿಗಳನ್ನು ನಿರ್ಮಾಣ ಮಾಡಬಯಸುತ್ತೇವೆ ಎಂದು. ನೀವು ಸಹ ಅದನ್ನೇ ಬಯಸುವಿರೋ?

ಆಗ ಹುಝೂರ್ ಹೇಳಿದರು. ಅದಂತೂ ಜರ್ಮನಿ ಜಮಾಅತ್ತಿನವರಿಗೆ ಪ್ರಾಥಮಿಕ ಹಂತವಾಗಿ ಒಂದು ಗುರಿ (Target) ನೀಡಲಾಗಿತ್ತು. ಅದರ ಅರ್ಥ ಒಂದು ನೂರು ಮಸೀದಿಗಳು ನಿರ್ಮಾಣವಾದ ನಂತರ ನಾವು ನಿಲ್ಲಿಸಬೇಕೆಂಬುದು ಅಲ್ಲ. ಬದಲು ನಾವು ಇಲ್ಲಿ ಜರ್ಮನಿಯಲ್ಲಿ ಇನ್ನಷ್ಟು ಮಸೀದಿಗಳನ್ನು ನಿರ್ಮಿಸುವೆವು. ಆದರೆ ಇನ್ನೂ ಈ 100 ಮಸೀದಿಗಳ ಗುರಿ (Target) ಪೂರ್ಣಗೊಂಡಿಲ್ಲ. ಸದ್ಯ ನಮ್ಮ ಲಕ್ಷ್ಯ ಆ ಗುರಿ ತಲುಪುವುದಾಗಿದೆ. ಆ ಗುರಿ ತಲುಪಿದ ನಂತರ ನಾನು ಅಥವಾ ನನ್ನ ನಂತರ ಬರುವವರು ಹೊಸ ಗುರಿ (Target) ನೀಡಬಹುದು.

ಸಂದರ್ಶನದ ಕೊನೆಯಲ್ಲಿ ಮಹಿಳಾ ಪತ್ರಕರ್ತೆ ಹುಝೂರರು ಸಮಯ ಕೊಟ್ಟಿದ್ದಕ್ಕೆ ಕೃತಜ್ಞತೆ ಅರ್ಪಿಸಿದರು. ಈ ಸಂದರ್ಶನವು 11 ಗಂಟೆಯವರಗೆ ಜಾರಿಯಲ್ಲಿತ್ತು.

**ಹುಝೂರರೊಡನೆ ರಾಯಭೇರಿ (Ambassador) ಭೇಟಿ**

ಅನಂತರ ರಾಯಭಾರಿ ಆದ Volker Bearesheim ಅವರು ಹುಝೂರರನ್ನು ಭೇಟಿಯಾದರು. ಅವರು ವಿದೇಶಾಂಗ ಮಂತ್ರಿ ಹಾಗೂ ಧಾರ್ಮಿಕ ಮತ್ತು ರಾಜಕೀಯ ವಿಭಾಗಕ್ಕೆ ಸಂಬಂಧಿಸಿದವರಾಗಿದ್ದರು. ಅವರು ಪ್ರಪ್ರಥಮವಾಗಿ ಹುಝೂರರ ಸೇವೆಯಲ್ಲಿ ಗತ ರಾತ್ರಿಯಲ್ಲಿ ನಿಯೋಜಿತಗೊಂಡಿದ್ದ ಸಮಾರಂಭದ ನಿಮಿತ್ತ ಸುಭಾಶಯಗಳನ್ನು ಕೋರಿದರು. ಆಗ ಹುಝೂರ್ ಹೇಳಿದರು. ಸಮಾಜದ ವಿವಿಧ ವರ್ಗಗಳ ಜನರು ಅಲ್ಲಿ ಬಂದು ಸೇರಿದ್ದರು ಎಂದು.

Dr. Denresheim ಹೇಳಿದರು. ಇಂದು ಲೋಕವು ಬಹಳ ಕ್ಲಿಷ್ಟವಾದ ಅಪಾಯಕರ ಸಮಸ್ಯೆಗಳಿಗೆ ಗುರಿಯಾಗಿದೆ. ಆದರೆ ಮೂರನೇ ಜಾಗತಿಕ ಮಹಾಯುದ್ಧ ಸಂಭವಿಸಬಹುದೆಂದು ನನಗೆ ಅನಿಸುತ್ತಿಲ್ಲ. ಆಗ ಹುಝೂರ್ ಹೇಳಿದರು. ನಿಜವಾಗಿಯೂ ಈ ಲೋಕ ಬಹಳಷ್ಟು ಅಪಾಯಗಳಿಗೆ ಗುರಿಯಾಗಿದೆ. ಆದರೆ ನೀವು ಮೂರನೇ ಜಾಗತಿಕ ಮಹಾಯುದ್ಧದ ಅಪಾಯವನ್ನು ತಳ್ಳಿಹಾಕುವಂತಿಲ್ಲ. ಹಗುರವಾಗಿ ಪರಿಗಣಿಸಲೂ ಬಾರದು.

ಅವರು ಹೇಳಿದರು. ನಾನು ಭಾವಿಸುತ್ತೇನೆ. ವಿವಿಧ ಸಾಮಾಜಿಕ ವರ್ಗಗಳಲ್ಲಿ ಆಂತರಿಕ ಸಮಸ್ಯೆಗಳು ಬಹಳಷ್ಟಿವೆ. ಆಗ ಹುಝೂರ್ ಹೇಳಿದರು. ಸಮಾಜದಲ್ಲಿ ಅಸಮಾಧಾನಗಳಿವೆ. ಆದರೆ ಈ ಅಶಾಂತ ಭಾವನೆಗಳು ಈಗ ದೇಶೀಯ ಗಡಿಗಳನ್ನು ದಾಟುತ್ತಿವೆ. ಆದುದರಿಂದ ವಿವಿಧ ದೇಶಗಳ ನಡುವೆಯೂ ವಿರೊಧಾಭಾಸಗಳು ಜನ್ಮ ತಾಳುತ್ತಿವೆ.

Dr. Beresheim ಹೇಳಿದರು. ಆ ಸಮಸ್ಯೆಗಳ ಪರಿಹಾರ ನಮಗೆ ಇನ್ನೂ ದೊರೆಯಲಿಲ್ಲ. ಆಗ ಹುಝೂರ್ ಹೇಳಿದರು. U.N.O. ಮತ್ತು ಅದರಂತಿರುವ ಇನ್ನಿತರ ಸಂಸ್ಥೆಗಳು ಅದಕ್ಕೆ ಪರಿಹಾರ ಆಗಬಲ್ಲದು. ಆದರೆ U.N.O ತನ್ನ ಕಾರ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಯೂರೋಪಿಯನ್ ಪಾರ್ಲಿಮೆಂಟಿನ ಸಭಾಂಗಣದಲ್ಲಿ ನಾನು ಮಾಡಿದ್ದ ಭಾಷಣ ಅದು ಯೂರೋಪಿಯನ್ Union ಪರವಾಗಿಯೇ ಆಗಿತ್ತು. ಯೂರೋಪಿಯನ್ ದೇಶಗಳ ಐಕ್ಯ ಅವಶ್ಯವಾಗಿ ನೆಲೆನಿಲ್ಲಬೇಕಾಗಿದೆ. ಆದರೆ ಇಂದು ಆ ಐಕ್ಯವು ಕ್ಷೀಣಿಸುವಂತೆ ಕಾಣುತ್ತದೆ. Brexit ಅಂತೂ ಕೇವಲ ಪ್ರಾರಂಭವಾಗಿದೆ. ಅದಾದ ನಂತರ ಇಟಲಿ, ಸ್ಪೇನ್ ಮತ್ತು ಇತರ ದೇಶಗಳೂ ಇದೇ ದಾರಿ ಹಿಡಿಯುವ ಸಾಧ್ಯತೆಯಿದೆ.

ಆಗ Dr. Berresheim ಹೇಳಿದರು. ಈ ಭಿನ್ನಮತ ಹಾಗೂ ಒಡಕಿನ ಹಿಂದೆ ಕರೆನ್ಸಿಯ ಕೈವಾಡವಿದೆ. ಹುಝೂರ್ ಹೇಳಿದರು. ಅಕ್ಷರಶಃ ಸರಿಯಾದ ಮಾತದು. ವಿವಿಧ ರೀತಿಯ ಸಂಘಟನೆಗಳು ಮತ್ತು ಗುಂಪುಗಳು ಇದರಿಂದ ಅಸ್ತಿತ್ವಕ್ಕೆ ಬರುತ್ತಿವೆ.

ಅವರು ಹೇಳಿದರು. ಲುಬ್ಜಾನಿಯ ವರದಿಯ ಪ್ರಕಾರ ಅಲ್ಲಿ ಆದ ಮಾತುಕತೆಯನ್ನು ವಿವಿಧ ಧರ್ಮಗಳು ಸ್ವಾಗತಿಸಿವೆ ಮತ್ತು ಅದರ ಸಕರಾತ್ಮಕ ಪರಿಣಾಮಗಳು ಮುಂದೆ ಬಂದಿವೆ.

ಆಗ ಹುಝೂರ್ ಹೇಳಿದರು. ಇಸ್ಲಾಮಿ ರಾಷ್ಟ್ರಗಳಲ್ಲಿ ನೀವು ನೋಡಬಹುದು. ಅಲ್ಲಿ ಹಲವು ಮುಸ್ಲಿಮ್ ಪಂಥಗಳು ಪರಸ್ಪರ ಒಬ್ಬರು ಇನ್ನೊಬ್ಬರ ಜೊತೆ ಬಿನ್ನಮತ ಹೊಂದಿವೆ. ಯಾವುದೇ ಏಕತ್ರಗೊಳಿಸುವ ಕೇಂದ್ರವಿಲ್ಲ. ಪ್ರತಿ ಗುಂಪಿಗೆ ತನ್ನದೇ ಆದ ಒಂದು ಠರಾವು ಇದೆ. ಪಾಕಿಸ್ತಾನದಲ್ಲಿ ಅದರ ವಿರಾಟ ರೂಪವನ್ನು ನೀವು ಕಾಣಬಹುದು.

ಹುಝೂರ್ ಹೇಳಿದರು. ಸರಕಾರಗಳಿಗೆ ಇತ್ತ ಹೆಚ್ಚಿನ ಗಮನಕೊಡುವ ಅವಶ್ಯಕತೆ ಇದೆ. ಧರ್ಮ ಮತ್ತು ಸರಕಾರವನ್ನು ಪ್ರತ್ಯೇಕಗೊಳಿಸುವುದು ತುಂಬಾ ಅನಿವಾರ್ಯವಾಗಿದೆ. ಇಲ್ಲವಾದರೆ ಶಾಂತಿ ಸ್ಥಾಪನೆ ಆಗಲು ಸಾಧ್ಯವಿಲ್ಲ. ಆದರೆ ಪ್ರಶ್ನೆಯೇನೆಂದರೆ ಧರ್ಮವನ್ನು ಸರಕಾರದಲ್ಲಿ ಹಸ್ತಕ್ಷೇಪ ಮಾಡದಂತೆ ಹೇಳುವವರು ಯಾರು?

ಅವರು ಹೇಳಿದರು. Lindau ದಲ್ಲಿ ಒಂದು ಧಾರ್ಮಿಕ ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ 900 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಅದರಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸದಸ್ಯರೂ ಪ್ರತಿನಿಧಿಸಿದ್ದರು. ಅವರು ಸಹ ಕಾರ್ಯತಂತ್ರ (Action plan) ಸಿದ್ಧಪಡಿಸಿದ್ದಾರೆ. ಆಗ ಹುಝೂರ್ ಹೇಳಿದರು. ನೋಡುವ, ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಎಂದು.

ಅವರು ಹೇಳಿದರು: ಧಾರ್ಮಿಕ ಸಂಘಟನೆಗಳು ಒಂಟಿಯಾಗಿ ನಿಂತರೆ ತನ್ನ ರೀತಿ ರಿವಾಜುಗಳಿಗೆ ಮತ್ತು ಸಂಸ್ಕೃತಿಗೆ ಬಂಧಿಯಾಗಿರುತ್ತದೆ. ಅವರ ಧ್ವನಿ ಕೇಳಿಸಲಾಗುವುದಿಲ್ಲ. ಅದರಿಂದ ಯಾವುದೇ ವಿಶೇಷವಾದ ಲಾಭ

ದೊರೆಯುವುದಿಲ್ಲ. ಆದರೆ ನೀವು ವಿವಿಧ ಸಂಘಟನೆಗಳನ್ನು ಒಟ್ಟುಗೂಡಿಸಿ ಯಾವುದೇ ಒಂದು ವಿಷಯದ ಮೇಲೆ ಒಕ್ಕೊರಲಿನ ಧ್ವನಿ ಎತ್ತಿದರೆ ಆಗ ನಿಮ್ಮ ಧ್ವನಿಗೆ ಬಲ ಬರುತ್ತದೆ ಮತ್ತು ಸರಕಾರಗಳೂ ಕಿವಿ ಕೊಡಬೇಕಾಗುತ್ತದೆ.

ಆಗ ಹುಝೂರ್ ಹೇಳಿದರು. ಇಂದಿನ ಸಮಸ್ಯೆ ಎಂದರೆ ಧಾರ್ಮಿಕ ನೇತಾರರು ಧರ್ಮೀಯರಾಗುವುದಕ್ಕಿಂತ ಹೆಚ್ಚು ರಾಜಕೀಯವಾಗಿರುತ್ತಾರೆ. ನನ್ನ ಪ್ರಾರ್ಥನೆಯಿದು. ನಿಮ್ಮ ಈ ಪ್ರಯತ್ನಗಳಿಂದ ಒಳ್ಳೆಯ ಪರಿಣಾಮ ಹೊರ ಬರಲಿ. ಆದರೆ ಜೊತೆಯಲ್ಲಿ ನಾನು ಇದನ್ನು ಹೇಳುವೆ. ನೀವು ಹೆಚ್ಚಿನ ಆಶಾಭಾವನೆಗೆ ಬಲಿಯಾಗುವುದು ಬೇಡ ಎಂದು.

ಭೇಟಿಯ ಈ ಕಾರ್ಯಕ್ರಮವು 11.25 ಗಂಟೆವರೆಗೆ ನಡೆಯಿತು. ಅಂತಿಮವಾಗಿ ಅವರು ಹುಝೂರ್‌ರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ಕೌಟುಂಬಿಕ ಭೇಟಿಗಳು:**

ಅನಂತರ ಕಾರ್ಯಕ್ರಮದನ್ವಯ ಕೌಟುಂಬಿಕ ಭೇಟಿಗಳು ಪ್ರಾರಂಭಗೊಂಡವು. ಇಂದು ಮುಂಜಾನೆಯ ಈ ಅಧಿವೇಶನದಲ್ಲಿ 41 ಕುಟುಂಬಗಳ 145 ಜನರು ಮತ್ತು 11 ಇತರರು ವೈಯಕ್ತಿಕವಾಗಿ ತಮ್ಮ ಪ್ರಿಯ ಇಮಾಮರ ಜೊತೆಯಲ್ಲಿ ಭೇಟಿಯಾಗುವ ಭಾಗ್ಯ ಪಡೆದರು.

ಭೇಟಿಯಾದ ಇವೆಲ್ಲ ಕುಟುಂಬಗಳು ಮತ್ತು ಬಾಂಧವರು ಹುಝೂರ್‌ರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಯಿಂದ ವಿದ್ಯೆ ಪಡೆಯುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾರಿತೋಷಕವಾಗಿ ಲೇಖನಿ(Pen) ನೀಡಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ಹಂಚಿದರು.

ಇಂದು ಭೇಟಿ ನೀಡುವ ಕುಟುಂಬಗಳಲ್ಲಿ ಜರ್ಮನಿಯ ವಿವಿಧ 18 ಜಮಾಅತುಗಳು ಬಂದಿದ್ದವು. ಕೆಲವು ಜಮಾಅತುಗಳು ಬಹು ದೂರದ ಪ್ರಯಾಣ ಬೆಳೆಸಿ ಬಂದಿದ್ದವು.

ಓಸ್ನಾಬ್ರೂಕ್‌ಯಿಂದ ಬಂದವರು 420 ಕಿ.ಮೀ ಫ್ರೆಂಕ್‌ಫರ್ಟ್‌ಯಿಂದ ಬಂದವರು 550 ಕಿ.ಮೀ, Bocholl ಮತ್ತು Dietzembach ಯಿಂದ ಬಂದವರು 560 ಕಿ.ಮೀ ಮತ್ತು ವೀಝ್‌ಬಾದಾನಿಂದ ಬಂದವರು 570 ಕಿ.ಮೀ ದೂರ ಕ್ರಮಿಸಿ ಬಂದವರಾಗಿದ್ದರು.

Plungstedt ನಿಂದ ವ್ಯಕ್ತಿಗಳು ಮತ್ತು ಕುಟುಂಬಗಳು 580 ಕಿ.ಮೀ Badremmac ಯಿಂದ ಬಂದವರು 600 ಕಿ.ಮೀ, Mamheim ಯಿಂದ ಬಂದ ಕುಟುಂಬಗಳು 625 ಕಿ.ಮೀ ದೂರ ಕ್ರಮಿಸಿ ತಮ್ಮ ಪ್ರಿಯ ನೇತಾರರನ್ನು ಭೇಟಿಯಾಗಲಿಕ್ಕಾಗಿ ಬಂದು ತಲುಪಿದ್ದರು. ಇಂದು ಭೇಟಿ ಮಾಡಿದವರಲ್ಲಿ ಕೆಲವು ಅರಬ್ ಬಾಂಧವರು ಮತ್ತು ಕುಟುಂಬಗಳೂ ಶಾಮೀಲಾಗಿದ್ದವು.

**ಒಂದು ಅನುಗ್ರಹಿತ ಸ್ವಪ್ನ :**

ಇಂದು ಓರ್ವ ಗೆಮ್‌ಬಿಯನ್ ಅಹ್ಮದಿ ಮಿತ್ರರು – Ahmadou Nisie ಸಾಹಿಬ್ – ಅವರೂ ಭೇಟಿಯಾಗುವ ಭಾಗ್ಯ ಪಡೆದರು. ಅವರು ಭೇಟಿಯಾದ ನಂತರ ಹೇಳಿದರು. ನಾನು 20 ವರ್ಷಗಳ ಹಿಂದೆ ಒಂದು ಸ್ವಪ್ನ ಕಂಡಿದ್ದೆ. ನಾನು ಈ ಸ್ವಪ್ನವನ್ನು ನನ್ನ ತಾಯಿಗೆ ಹೇಳಿದಾಗ ಅವರು ಹೇಳಿದರು. ನಾನು ಹುಝೂರರೊಂದಿಗೆ ಭೇಟಿಯಾಗುವವರಿಗೂ ಯಾರಿಗೂ ತಿಳಿಸಬಾರದು. ಆದುದರಿಂದ ನಾನು ಆ ಸ್ವಪ್ನ ಹುಝೂರರನ್ನು ಭೇಟಿಯಾಗುವ ಮುಂಚೆ ಯಾರಿಗೂ ತಿಳಿಸಿರಲಿಲ್ಲ.

ಇಂದಿನ ಭೇಟಿಯ ಸಮಯದಲ್ಲಿ ಹುಝೂರರಿಗೆ ಈ ಸ್ವಪ್ನದ ವಿಷಯ ಹೇಳಿದೆ. ಈಗ ನನಗೆ ನನ್ನ ಎಲ್ಲ ಬಾಗಿಲುಗಳು ತೆರೆದಿರುವಂತೆ ಕಾಣುತ್ತವೆ ಮತ್ತು ನಾನು ತುಂಬ ಸಂತುಷ್ಟನಾಗಿದ್ದೇನೆ. ಹುಝೂರರನ್ನು ಟಿ.ವಿ ಯಲ್ಲಿ ನೋಡುವುದರಲ್ಲಿ ಮತ್ತು ಹೀಗೆ ಸಮಕ್ಷಮ ನೊಡುವುದರಲ್ಲಿ ತುಂಬ ವ್ಯತ್ಯಾಸವಿದೆ. ಆ ಮಿತ್ರರು ಸ್ವಪ್ನದ ಬಗ್ಗೆ ಹೇಳಿದರು: "ನಾನು ನೀರಿನಲ್ಲಿದ್ದೇನೆ. ಅಲ್ಲಿ ಲಕ್ಷೋಪಲಕ್ಷ ದೇವದೂತರು ನಿಂತಿದ್ದಾರೆ. ನಾನು ದೇವದೂತರೊಡನೆ ಕೇಳುತ್ತೇನೆ. ನೀವು ಇಲ್ಲಿ ಏನು ಮಾಡುತ್ತಿದ್ದೀರಿ. ಆಗ ದೇವದೂತರು ಉತ್ತರ ಕೊಡುತ್ತಾರೆ. ನೀವು ಆಕಾಶದ ಕಡೆ ನೋಡಲಿಲ್ಲವೇ? ನಾನು ಆಕಾಶದ ಕಡೆ ನೋಡಿದರೆ ಅಲ್ಲಿ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದಾರೆ. ನಾನು ಆ ದೇವದೂತರೊಡನೆ ಕೇಳುತ್ತೇನೆ. ಆ ವ್ಯಕ್ತಿ ಯಾರು? ಮತ್ತು ಸ್ವಯಂ ಅವರೊಡನೆ ಹೇಳುತ್ತೇನೆ. ಈ ಮಾತು ಸರಿಯಾಗಿದೆಯೇ ಈ ವ್ಯಕ್ತಿ ರಸೂಲುಲ್ಲಾಹ್(ಸ) ರವರ ಸುನ್ನತ್ ಮತ್ತು ಅವರ(ಸ) ನಡವಳಿಕೆಯನ್ನು ಪ್ರದರ್ಶಿಸಲು ಬಂದಿರುವರು. ಆಗ ದೇವದೂತರು ಹೌದೆಂದು ಉತ್ತರಿಸುತ್ತಾರೆ. ನಾನು ಹುಝೂರರಿಗೆ ಹೇಳುತ್ತೇನೆ. ಅದೇ ಕಾರಣದಿಂದ ನಾನು ನಿಮ್ಮನ್ನು ಭೇಟಿಯಾಗಲು ಬಂದಿರುತ್ತೇನೆ. ನಿಮ್ಮ ಸೇವೆಯಲ್ಲಿ ಸಲಾಂ ಹೇಳಬಯಸುತ್ತೇನೆ ಮತ್ತು ನಿಮ್ಮಿಂದ ಅನುಗ್ರಹಗಳನ್ನು ಪಡೆದು ಮರಳಬಯಸುತ್ತೇನೆ.

ಹುಝೂರರು ಒಪ್ಪಿಕೊಂಡರು. ಅನಂತರ ನಾನು ಹುಝೂರರೊಂದಿಗೆ ಹಸ್ತಲಾಘವ ಮಾಡುತ್ತೇನೆ ಮತ್ತು ಹುಝೂರ್ ನನಗೆ ಒಂದು ಲಕೋಟೆಯನ್ನು ನೀಡುತ್ತಾರೆ. ಅದನ್ನು ನಾನು ಕಿಸೆಯಲ್ಲಿ ಹಾಕಿಕೊಳ್ಳುತ್ತೇನೆ ಮತ್ತು ಮರಳಿ ಕೆಳಗೆ ಬಂದು ಜನರಿಗೆ ಹೇಳುತ್ತೇನೆ. ನಾನು ಆ ಮಹೋನ್ನತ ವ್ಯಕ್ತಿಯೊಡನೆ ಭೇಟಿಯಾಗಿ ಬಂದಿರುತ್ತೇನೆ. ಅವರು ನನಗೋಸ್ಕರ ಪ್ರಾರ್ಥಿಸಿದ್ದಾರೆ. ನನಗೆ ಅನುಗ್ರಹಿಸಿದ್ದಾರೆ. ಆ ಅನುಗ್ರಹಗಳನ್ನು ಪಡೆದು ಮನೆಗೆ ಮರಳುತ್ತಿದ್ದೇನೆ. ನಾನು ಕೆಳಗೆ ಬಂದಾಗ ಅಲ್ಲಿ ಒಂದು Helicopter ಹಾರುತ್ತಿರುತ್ತದೆ. ನಾನು ಜನರಿಗೆ ಕೇಳುತ್ತೇನೆ. Holicoptor ಇಲ್ಲಿ ಏಕೆ ಬಂದಿದೆ? ಮತ್ತೆ ಸ್ವಪ್ನದಲ್ಲಿಯೇ ನಾನು Helicopter ಒಳಗೆ ಹೋಗುತ್ತೇನೆ. ಅದು ಮಸೀದಿಯ ಮೇಲೆ ಹಾರುತ್ತದೆ. ಆ ಮಸೀದಿಯು "ಖದೀಜ ಮಸೀದಿ" ಆಗಿರುತ್ತದೆ. ನಾನು ಮಸೀದಿಗೆ ತಲುಪಿ ಆ ಲಕೋಟೆ ತೆರೆಯುತ್ತೇನೆ. ಅದರಲ್ಲಿ ಅನುಗ್ರಹಗಳಿರುತ್ತವೆ. ಆ ಅನುಗ್ರಹಗಳನ್ನು ನಾನು ತನ್ನ ಕುಟುಂಬದಲ್ಲಿ ಹಂಚಿ ಬಿಡುತ್ತೇನೆ.

ಅವರು ಹೇಳುತ್ತಾರೆ. ಗತ ವರ್ಷ ನಾನು ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದೆ. ಅಲ್ಲಿ Helicopter ಸಹ ಹಾರುತ್ತಿತ್ತು. ಮತ್ತು ಹುಝೂರ್ ಧ್ವಜಾರೋಹಣ ಮಾಡುತ್ತಿದ್ದರು. ಸಾವಿರಾರು ಜನರು ಅಲ್ಲಿ ನಿಂತು ಘೋಷಣೆಗಳನ್ನು ಹಾಕುತ್ತಿದ್ದರು. ನವಾಝುಗಳ ನಂತರ ನಾನು ಮಲಗಿಕೊಂಡಾಗ ನನಗೆ ಮತ್ತೆ ಅದೇ ಸ್ವಪ್ನ ಮರುಕಳಿಸಿತು. ಒಬ್ಬ ಮನುಷ್ಯನು ನನಗೆ ಹೇಳುತ್ತಾನೆ. ನಿಮಗೆ ಆ ಮಹೋನ್ನತ ವ್ಯಕ್ತಿಯನ್ನು ಕಂಡಿದ್ದ ಸ್ವಪ್ನ ನೆನಪಿದೆಯೇ. ಇಂದು ಧ್ವಜಾರೋಹಣ ಮಾಡಿದ ವ್ಯಕ್ತಿ ನೀವು ಸ್ವಪ್ನದಲ್ಲಿ ಕಂಡಿದ್ದ ವ್ಯಕ್ತಿಯೇ ಆಗಿದ್ದಾರೆ. ಅದಾದ ನಂತರ ನಾನು ಹುಝೂರರನ್ನು ಪ್ರಥಮ ಬಾರಿಗೆ ಕಾಣುವಾಗ ಅಳತೊಡಗಿದೆ. ನಾನು ಜಲ್ಸ ಸ್ಥಳದಲ್ಲಿ ಗೇಟಿನ ಬಳಿ ಇದ್ದೆ. ಹುಝೂರ್ ನನ್ನ ತೀರ ಹತ್ತಿರದಿಂದ ಹಾದು ಹೋದರು. ನನ್ನ ಜೀವನದಲ್ಲಿ ಮೊದಲ ಬಾರಿ ಹುಝೂರ್ ಅಷ್ಟೊಂದು ಹತ್ತಿರವಾಗಿದ್ದರು. ನನ್ನ ಶರೀರದ ಮೇಲೆ ಯಾರೋ ಅರ್ಧ ಪ್ರಮಾಣದ ಬಿಸಿ ನೀರು ಸುರಿಸಿದಂತಾಯಿತು. ಅದಾದ ನಂತರ ನಾನು ಒಂದು ಗಂಟೆಯವರೆಗೆ ಅಳುತ್ತ ಹೊರಟು ಹೋದೆ.

ಮೊದಲಂತೂ ನಾನು ಹುಝೂರರನ್ನು ಸಮೀಪದಿಂದ ಕಂಡಿದ್ದೆ. ಇಂದು ಅಲ್ಲಾಹನ ಅನುಗ್ರಹದಿಂದ ನನಗೆ ಮಸ್ಜಿದ್ ಖದೀಜದಲ್ಲಿಯೇ ಹುಝೂರ್‌ರೊಂದಿಗೆ ಭೇಟಿಯಾಗುವ ಭಾಗ್ಯ ಬಂದೊದಗಿದೆ. ಈ ಮಸೀದಿಯನ್ನೇ ನಾನು ಸ್ವಪ್ನದಲ್ಲಿ ಕಂಡಿದ್ದು.

ಭೇಟಿಯ ಈ ಕಾರ್ಯಕ್ರಮ 1.40 ಗಂಟೆಯವರೆಗೆ ನಡೆಯಿತು. ಅನಂತರ ಸ್ಥಳೀಯ ಮಜ್ಲಿಸ್ ಆಮಿಲಾ ಜಮಾಅತ್ ಬರ್ಲಿನ್ ಮತ್ತು ಖುದ್ದಾಮುಲ್ ಅಹ್ಮದಿಯಾ ರಕ್ಷಣಾ ತಂಡ ಹುಝೂರ್‌ರ ಜೊತೆಯಲ್ಲಿ ಸಾಮೂಹಿಕ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ಆಮೀನ್ ಸಮಾರಂಭ:**

2 ಗಂಟೆಗೆ ಹುಝೂರ್ ಮಸ್ಜಿದ್ ಖದೀಜಕ್ಕೆ ಆಗಮಿಸಿದರು ಮತ್ತು ಕಾರ್ಯಕ್ರಮದನ್ವಯ ಆಮೀನ್ ಸಮಾರಂಭ ನಿಯೋಜನೆಗೊಂಡಿತು. ಹುಝೂರ್ ಕೆಳಗೆ ನಮೂದಿತ 24 ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಅಝೀಝುಮ್ ಅರ್‌ಸಲ್ ಇಮ್ರಾನ್ ಶಾಹಿದ್, ಬಿಲಾಲ್ ಅಹ್ಮದ್, ಸರ್‌ಪರಾಝ್ ಅಹ್ಮದ್, ನೂರುದ್ದೀನ್ ಖಾಸಿಮ್, ಮುಹ್‌ಸಿನ್ ಜಾವೇದ್, ಮಾಹಿರ್ ಚೀಮ, ಜಾಝಿಬ್ ಅತಾ, ಅಲೀಝ್ ಅಹ್ಮದ್, ಫರ್‌ಸಾದ್ ಮಹ್ಮೂದ್, ಖಾಕಾನ್ ಆರಿಫ್, ಅದ್‌ನಾನ್ ಮಹ್ಮೂದ್, ಮಲಿಕ್, ಮಸ್‌ರೂರ್ ಅಹ್ಮದ್ ಮಲಿಕ್, ಹಾರಿಸ್ ವಲೀದ್ ಅಹ್ಮದ್, ಮತ್ತು ಬಾಸಿಲ್ ಇಮ್ರಾನ್,

ಹುಡುಗೀಯರು: ಅಝೀಝು ಯುಸ್ರ, ಮನ್ನಾನ್, ಝಾರಹ್ ಮನ್‌ಸೂರ್, ರೂಹಾ ಉಮರ್, ಹಿಬ ನಾಸಿರ್, ಸಬಾಹ ಮುನೀರ್, ಇನಾಯ ಅಹ್ಮದ್, ತಾಬೀನ ಮಸ್‌ರೂರ್, ಕಶ್ಮಾಲ ಸೆಹೆರ್, ಅಲೂನೀಯ ಮಸರ್ರತ್ ಶಾಕಿರ್ ಮತ್ತು ಆಯಾನ್ ಖಾನ್.

ಆಮೀನ್ ಸಮಾರಂಭದ ನಂತರ ಹುಝೂರ್ ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**ಮಹದಿಯಾಬಾದ್‌ಗೆ ಪಯಣ:**

ಇಂದು ಕಾರ್ಯಕ್ರಮದನ್ವಯ ಬರ್ಲಿನ್‌ನಿಂದ ಮಹದಿಯಾಬಾದ್ (ಹೆಂಬರ್ಗ್)ಗೆ ಪಯಣಿಸಬೇಕಾಗಿತ್ತು. 4.25 ಗಂಟೆಗೆ ಹುಝೂರ್ ತಮ್ಮ ವಸತಿ ನಿಲಯದಿಂದ ಹೊರಗೆ ಆಗಮಿಸಿದರು. ಹುಝೂರ್‌ರಿಗೆ ವಿದಾಯ ಕೋರಲು ಸ್ತ್ರೀ ಪುರುಷರಾದಿ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಮಿಷನ್ ಹೌಸಿನ ಹೊರಾಂಗಣದಲ್ಲಿ ಬಂದು ಸೇರಿದ್ದರು. ಬಾಲಕಿಯರ ಗುಂಪು ವಿದಾಯ ಕೋರುವ ಪ್ರಾರ್ಥನಾ ಗೀತೆಗಳನ್ನು ಹಾಡುತ್ತಿದ್ದರು.

ಕಾರ್ಯಕ್ರಮದನ್ವಯ ಹುಝೂರ್ ಮಿಷನ್ ಹೌಸಿನ ಹೊರಾಂಗಣದಲ್ಲಿ ಬಾದಾಮಿನ ಸಸ್ಯವನ್ನು ನೆಟ್ಟರು. ಅನಂತರ ಹುಝೂರ್ ಜಮಾಅತ್ ಬಾಂಧವರ

ನಡುವೆ ಆಗಮಿಸಿದರು. ಹುಝೂರ್ ಪ್ರೀತಿಯಿಂದ ಮಕ್ಕಳಿಗೆ ಚಾಕ್ಲೇಟ್ ನೀಡಿದರು. ಜಮಾಅತ್ ಬಾಂಧವರು ತಮ್ಮ ಕೈ ಮೇಲಕ್ಕೆತ್ತಿ ತಮ್ಮ ಪ್ರಿಯ ಇಮಾಮರಿಗೆ ವಿದಾಯ ಕೋರಿದರು. ಮಹಿಳೆಯರು ವಿದಾಯ ಕೋರುತ್ತ ದರ್ಶನ ಭಾಗ್ಯ ಪಡೆದರು. 4 ಗಂಟೆ 40 ನಿಮಿಷಕ್ಕೆ ದುಆ ಮಾಡಿಸಿದರು ಮತ್ತು ಪ್ರವಾಸಿ ತಂಡವು ಮಹದಿಯಾಬಾದ್ (ಹೆಂಬರ್ಗ್) ಗೆ ಪ್ರಯಾಣ ಬೆಳೆಸಿತು. ಖದೀಜ ಮಸೀದಿ, ಬರ್ಲಿನ್‌ನಿಂದ ಮಹದಿಯಾಬಾದಿನ ದೂರ 300 ಕಿ.ಮೀ ಆಗಿದೆ. ಮಹದಿಯಾಬಾದ್ ಒಂದು ಗ್ರಾಮ. ಅದು Nahe ಮತ್ತು Segeberg ಜಿಲ್ಲೆಯಲ್ಲಿ ಇದೆ. Schleswig Holstein ರಾಜ್ಯವಾಗಿದೆ. ಇದು ಜರ್ಮನಿಯ ಉತ್ತರ ಭಾಗದಲ್ಲಿದೆ. ಈ ರಾಜ್ಯದ ರಾಜಧಾನಿ Kiel ಆಗಿದೆ. ಇದು ಆ ಭಾಗ್ಯಶಾಲಿ ನಗರವಾಗಿದೆ. ಅದರ ಒಂದು ಜರ್ಮನ್ ನಾಗರಿಕನು ತನ್ನ ಜೀವಿತ ಅವಧಿಯಲ್ಲಿಯೇ ಹಝ್‌ರತ್ ಅಖದಸ್ ಮುಸೀಹ್ ಮೌಊದ್(ಅ) ರನ್ನು ಗುರುತಿಸಿದ್ದ ಮತ್ತು ಅವರ ಮೇಲೆ ವಿಶ್ವಾಸ ತಂದಿದ್ದ.

ಸುಮಾರು 3 ಗಂಟೆಯ ಪ್ರಯಾಣದ ನಂತರ 7 ಗಂಟೆ 45 ನಿಮಿಷಕ್ಕೆ ಹುಝೂರ್ ಮಹದಿಯಾಬಾದ್‌ಗೆ ಆಗಮಿಸಿದರು. ಮಹದಿಯಾಬಾದ್ ತಲುಪುವ 7–8 ಕಿ.ಮೀ ಮುಂಚೆ ಪೋಲೀಸರ ವಾಹನ ಪ್ರವಾಸಿ ತಂಡವನ್ನು ಗೌರವದಿಂದ Escort ಮಾಡಿತು.

ಹುಝೂರ್ ಅವರ ವಾಹನ ಮಹದಿಯಾಬಾದಿನ ಹೊರಗೇಟಿನ ಒಳಗೆ ಪ್ರವೇಶಿಸಿದಾಗ ಮಹದಿಯಾಬಾದ್ ಮತ್ತು ಅದರ ಅಕ್ಕಪಕ್ಕದ ಜಮಾಅತ್ತುಗಳಿಂದ ಆಗಮಿಸಿದ 11 ನೂರಕ್ಕಿಂತಲೂ ಹೆಚ್ಚಿನ ಸದಸ್ಯರು ತಮ್ಮ ಪ್ರಿಯ ಇಮಾಮರಿಗೆ ಭವ್ಯ ಸ್ವಾಗತ ಕೋರಿದರು. ಉತ್ಸಾಹಪೂರ್ವಕವಾಗಿ ಘೋಷಣೆಗಳನ್ನು ಹಾಕಿದರು. ಬಾಲಕ ಬಾಲಕಿಯರು ಪ್ರತ್ಯೇಕ ಗುಂಪುಗಳಾಗಿ ಸ್ವಾಗತ ಗೀತೆಗಳನ್ನು ಹಾಗೂ ಪ್ರಾರ್ಥನಾ ಗೀತೆಗಳನ್ನು ಪ್ರಸ್ತುತಪಡಿಸಿದರು.

ಮಹದಿಯಾಬಾದ್ (Nahe) ಜಮಾಅತ್ ಅಲ್ಲದೇ Pinne Berg, Husum, Ditmarschen, Bad Segeberg, Schleshwig, Kiel, Lukbeck Luneberg, Buxtehude, Vechta, Stade, Hamburg, Bremen. ಜಮಾಅತ್ತುಗಳ ಬಾಂಧವರು ತಮ್ಮ ಪ್ರಿಯ ಇಮಾಮರಿಗೆ ಸ್ವಾಗತ ಕೋರಲು ಬಂದು ಸೇರಿದ್ದರು. ಹುಝೂರ್ ಕೆಲ ಸಮಯಕ್ಕಾಗಿ ತಮ್ಮ ವಸತಿನಿಲಯಕ್ಕೆ ತೆರಳಿದರು.

ಹುಝೂರ್ 8 ಗಂಟೆ 30 ನಿಮಿಷಕ್ಕೆ ತಮ್ಮ ವಸತಿನಿಲಯದಿಂದ ಹೊರಗೆ ಆಗಮಿಸಿದರು. ಆ ಕ್ಷೇತ್ರದ ಮೇಯರ್ Heiger Fisher ಹುಝೂರರನ್ನು ಸ್ವಾಗತಿಸಲು ಬಂದಿದ್ದರು. ಮುಕರ್ರಮ್ ಅಬ್ದುರ್ ರವೂಫ್ ಸಾಹಿಬ್, ಅಧ್ಯಕ್ಷರು ಮದಿಯಾಬಾದ್ ಜಮಾಅತ್ (Nahe) ಅವರು ಹುಝೂರ್‌ರೊಂದಿಗೆ ಹಸ್ತಲಾಘವ ಮಾಡಿದರು.

ಹುಝೂರ್ ಮೇಯರ್‌ರೊಂದಿಗೆ ಸೌಹಾರ್ದಯುತವಾಗಿ ಮಾತನಾಡಿದರು. ಮತ್ತು ಹಸ್ತಲಾಘವ ನೀಡಿದರು.

ಅನಂತರ ಹುಝೂರ್ **"ಮಸ್ಜಿದ್ ಬೈತುಲ್ ಬಶೀರ್‌ಗೆ"** ಆಗಮಿಸಿ ಮಗ್ರಿಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**24 ಅಕ್ಟೋಬರ್ 2019 (ಗುರುವಾರ):**

ಹುಝೂರ್ ಮುಂಜಾನೆ 7 ಗಂಟೆಗೆ ಮಸ್ಜಿದ್ ಬೈತುಲ್ ಬಶೀರ್‌ಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಕಚೇರಿ ಅಂಚೆಗಳನ್ನು, ಪತ್ರಗಳನ್ನು ವರದಿಗಳನ್ನು ಪರಿಶೀಲಿಸಿದರು. ಆ ಪತ್ರಗಳ ಮತ್ತು ವರದಿಗಳ ಕುರಿತು ತಮ್ಮ ಶುಭಹಸ್ತದಿಂದ ನಿರ್ದೇಶನಗಳನ್ನು ನೀಡಿದರು. ಅಲ್ಲದೆ ಹುಝೂರ್‌ರು ಇತರ ಕಚೇರಿ ಕಾರ್ಯಗಳನ್ನು ಮಾಡುವುದರಲ್ಲಿ ತೊಡಗಿದರು.

**ಉಪಸ್ಥಿತ ಹಾಗೂ ಅನುಪಸ್ಥಿತರ ಜನಾಝ ನಮಾಝ್**

ಮಧ್ಯಾಹ್ನ 2 ಗಂಟೆಗೆ ಹುಝೂರ್ ಆಗಮಿಸಿ ಮುಕರ್ರಮ್ ಕುಲ್ಸೂಮ್ ಅಖ್ತರ್ ಸಾಹಿಬಾ, ಗಂಡ ಮುಕರ್ರಮ್ ಬಶೀರ್ ಅಹ್ಮದ್ ಸಾಹಿಬ್, ದಿವಂಗತರು ಚಕ್ ನಂಬ್ರ 106 ರಹೀಂಯಾರ್ ಖಾನ್ ಪಾಕಿಸ್ತಾನ ಅವರ ಜನಾಝ ನಮಾಝ್ ಉಪಸ್ಥಿತ ಮತ್ತು ಕೆಳಗೆ ನಮೂದಿತ 5 ದಿವಂಗತರ ಅನುಪಸ್ಥಿತ ಜನಾಝ ನಮಾಝ್ ನಿರ್ವಹಿಸಿಕೊಟ್ಟರು.

ರಾನಾ ಮುಹಮ್ಮದ್ ಶಹ್‌ಬಾಝ್ ಸಾಹೆಬ್‌ರವರ ಪತ್ನಿ ಮುಹ್ತರಮ ಸಲೀಮ್ ಅಖ್ತರ್ ಸಾಹಿಬ ರಬ್ವಾ ಪಾಕಿಸ್ತಾನ, ಚೌಧ್ರಿ ಮುಹಮ್ಮದ್ ಶರೀಫ್ ಸಾಹೆಬ್‌ರವರ ಪತ್ನಿ ಮುಹ್ತರಮ ಅಮತುಲ್ ಖಯ್ಯೂಮ್ ಸಾಹಿಬ, ಮುಕರ್ರಮ್ ಅನ್ವರ್ ಅಹ್ಮದ್ ಹಾಶ್ಮಿ ಸಾಹೆಬ್, ಮುಕರ್ರಮ್ ಅಶ್ರಫ್ ಸಝೀರ್ ಅಹ್ಮದ್ ಸಾಹೆಬ್, ಮುಕರ್ರಮ ಅಸ್ಮಾ ಮುಮತಾಝ್ ಸಾಹಿಬ, ಮುಕರ್ರಮ್ ಅಖ್ತರ್ ಹುಸೈನ್ ಸಾಹೆಬ್ ಖಾದಿಯಾನ್. ಅನಂತರ ಹುಝೂರ್ ಮಸ್ಜಿದ್ ಬೈತುಲ್ ಬಸೀರ್‌ಗೆ ಆಗಮಿಸಿ ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕೌಟುಂಬಿಕ ಭೇಟಿಗಳನ್ನು ಪ್ರಾರಂಭಿಸಿದರು. ಇಂದು ಸಂಜೆಯ ಈ ಅಧಿವೇಶನದಲ್ಲಿ 35 ಕುಟುಂಬಗಳ 114 ಜನರು ಹಾಗೂ ಇತರ 11 ಜನರು ವೈಯಕ್ತಿಕವಾಗಿ ತಮ್ಮ ಪ್ರಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿ ಮಾಡಿದ ಈ ಕುಟುಂಬಗಳು ಮಹದಿಯಾಬಾದ್‌ನಿಂದಲ್ಲದೆ ಜರ್ಮನಿಯ ಈ ಕೆಳಗೆ ನಮೂದಿತ ಜಮಾಅತ್ತಿನಿಂದ ಬಂದಿದ್ದರು.

Soltau, Hamburg, Kiel, Bremen, Pinneberg, Lubeck, Reheine, Jesteberg, Hannover. ಇವರಲ್ಲದೆ ಪಾಕಿಸ್ತಾನದಿಂದ ಬಂದಿದ್ದ ಓರ್ವ ಮಿತ್ರರೂ ಭೇಟಿಯಾಗುವ ಭಾಗ್ಯ ಪಡೆದರು.

ಭೇಟಿ ಮಾಡಲು ಬಂದ ಇವರೆಲ್ಲ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ತಮ್ಮ ಪ್ರಿಯ ನೇತಾರರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯವನ್ನೂ ಪಡೆದರು. ಹುಝೂರ್ ಪ್ರೀತಿಯಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ (Pen) ಪಾರಿತೋಷಕವಾಗಿ ನೀಡಿದರು. ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್ ಹಂಚಿದರು. ಭೇಟಿಯ ಈ ಕಾರ್ಯಕ್ರಮವು 8 ಗಂಟೆಯವರೆಗೆ ನಡೆಯಿತು. ಅನಂತರ ಹುಝೂರ್ ಮಸ್ಜಿದ್ ಬೈತುಲ್ ಬಸೀರ್‌ಗೆ ಆಗಮಿಸಿ ಮಗ್ರಿಬ್, ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

**(ಮುಂದುವರಿಯುವುದು)**

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 18 June 2020 Issue No. 23

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹುಝೂರ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 22ರ ವರದಿಯ ಉಳಿದ ಭಾಗ)**

Hienrich ಪಾರ್ಲಿಮೆಂಟ್ ಸದಸ್ಯರು ಮುಂದುವರೆದು ಹೇಳಿದರು. ನಾನು ಮೊದಲು ಒಬ್ಬ ಪಾದರಿಯಾಗಿದ್ದೆ. ನನ್ನ ದೃಷ್ಟಿಯಲ್ಲಿ ಒಂದು ಬಹು ಮುಖ್ಯ ಮಾತು ಏನೆಂದರೆ ಕೇವಲ ಮಾತನಾಡಬಾರದು. ಮಾತುಗಳಂತೆ ಕೃತಿಯಲ್ಲಿಯೂ ಕಾಣುವಂತಾಗಬೇಕು. ಇದು ನಿಮ್ಮ ಜಮಾಅತಿನಲ್ಲಿ ನನಗೆ ಕಂಡು ಬರುತ್ತಿದೆ. ನನಗೆ ತುಂಬ ಸಂತೋಷವಿದೆ. ನೀವು ಖಲೀಫರ ನೇತೃತ್ವದಲ್ಲಿ ಇಸ್ಲಾಮಿನ ಶಿಕ್ಷಣವನ್ನು ಪುನಃ ಜನರ ಮುಂದೆ ಪ್ರಸ್ತುತಪಡಿಸುತ್ತಿದ್ದೀರಿ. ಅದರ ಮೌಲ್ಯಗಳನ್ನು ಸ್ಥಾಪಿಸುತ್ತಿದ್ದೀರಿ ಮತ್ತು ಈ ಸಂದೇಶ ಜನರಿಗೆ ತಲುಪಿಸುತ್ತಿದ್ದೀರಿ. ನೀವು ನಿಜವಾಗಿಯೂ ಇತರ ಧರ್ಮೀಯ ಜಮಾಅತುಗಳಿಂದ ಭಿನ್ನರಾಗಿದ್ದೀರಿ. ನನಗೆ ಈ ಮಾತಿನ ಸಂತೋಷವೂ ಇದೆ ಮತ್ತು ಆಶಯವೂ ಇದೆ. ಇಂದು ಏರ್ಪಡಿಸಿದಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದಲ್ಲದೇ ಅದನ್ನು ಜನರಿಗೆ ಮನವರಿಕೆಯಾಗುವಂತೆ ಪ್ರಸಾರ ಮಾಡಬೇಕು.

ಅನಂತರ Omid Nouripoor ಸಾಹಿಬ್ ತಮ್ಮ ಪರಿಚಯ ಭಾಷಣ ಮಾಡಿದರು. ಅವರ ಸಂಬಂಧವು Grune ಪಕ್ಷದಿಂದಿದೆ ಮತ್ತು ಅವರು ನ್ಯಾಷನಲ್ ಅಸೆಂಬ್ಲಿಯ ಸದಸ್ಯರಾಗಿದ್ದಾರೆ. ಅದೇ ರೀತಿ ವಿದೇಶಾಂಗ ಖಾತೆಯ ವಕ್ತಾರರಾಗಿದ್ದಾರೆ.

ಅವರು ಮೊಟ್ಟ ಮೊದಲಾಗಿ ಹುಝೂರರಿಗೆ ಶುಭಾಗಮನ ಕೋರುತ್ತಾ ಇದು ತನಗೆ ದೊರೆತ ತುಂಬ ಸಂತೋಷದ ಅವಕಾಶವಾಗಿದೆ ಎಂದು ಅವರು ಹೇಳಿದರು. ಇತ್ತೀಚೆಗೆ ಯಾರು ಮುಸ್ಲಿಮರು ಮತ್ತು ಯಾರು ಅಲ್ಲ ಎಂಬ ಪ್ರಶ್ನೆ ಹೆಚ್ಚು ಹೆಚ್ಚಾಗಿ ಕೇಳಿಬರುತ್ತದೆ. ಈ ಮಾತು ಇಸ್ಲಾಮ್‌ಗೆ ಮಾತ್ರ ಸೀಮಿತವಲ್ಲ. ಹಾಗೆಯೇ ಯಾರು ಮೂಮಿನ್, ಯಾರೂ ಅಲ್ಲ ಎಂಬ ಪ್ರಶ್ನೆಯೂ ಎದುರಾಗುತ್ತದೆ. ಅದನ್ನು ಪ್ರತಿಯೊಬ್ಬನೂ ತನ್ನೊಂದಿಗೆ ತಾನು ಉದ್ದೇಶಿಸಿಕೊಂಡು ಸ್ವಯಂ ನಿರ್ಣಯಿಸಿ ಉತ್ತರ ಕಂಡುಕೊಳ್ಳಬೇಕಾಗಿದೆ. ಇತರರ ಬಗ್ಗೆ ನಿರ್ಣಯಿಸಲು ನಮಗೆ ಹಕ್ಕಿಲ್ಲ. ಒಬ್ಬನನ್ನು ಪಾಪಿ ಎನ್ನುವುದು ಅಥವಾ ಅವನೊಂದಿಗೆ ಭಿನ್ನಮತ ಹೊಂದುವುದು ಸರಿಯಾಗಿದೆ. ಆದರೆ ಒಬ್ಬನನ್ನು ಅಮುಸ್ಲಿಮ ಅಥವಾ ಕಾಫಿರ್ ಎನ್ನುವುದು ಸರಿಯಲ್ಲ ಎಂದರು.

ಅಹ್ಮದಿಯಾ ಜಮಾಅತು ಪ್ರಾರಂಭದಿಂದಲೇ ಇದನ್ನು ಎದುರಿಸುತ್ತ ಬಂದಿದೆ. ಈ ಸಮಸ್ಯೆ ಪಾಕಿಸ್ತಾನದಲ್ಲಿ ಅತ್ಯಧಿಕವಾಗಿದೆ. ಆದರೆ ಇತರ ದೇಶಗಳಲ್ಲಿಯೂ ಅಹ್ಮದಿಯರ ವಿರುದ್ಧ ಜನರನ್ನು ಉತ್ತೇಜಿಸುತ್ತಾರೆ. ಉದಾಹರಣೆಗೆ ಬಾಂಗ್ಲಾದೇಶ ಇತ್ಯಾದಿ, ಆದರೆ ನನ್ನನ್ನು ಅತ್ಯಂತ ಪ್ರಭಾವಿತಗೊಳಿಸಿದ ವಿಷಯವೆಂದರೆ ಅದು ಅಹ್ಮದಿಯಾ ಜಮಾಅತಿನ ಪ್ರತಿಕ್ರಿಯೆಯಾಗಿದೆ. ಅಹ್ಮದಿಯಾ ಜಮಾಅತಿನ ಪ್ರತಿಕ್ರಿಯೆ ಎಂದರೆ ಅದು – ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ" ಎಂಬುದಾಗಿದೆ. ಇದೊಂದು ಎಂತಹ ಒಳ್ಳೆಯ ಧ್ಯೇಯ ಮತ್ತು ತತ್ವವಾಗಿದೆ! ಇದನ್ನು ಕೇವಲ ಧಾರ್ಮಿಕ ವಿಷಯಗಳಲ್ಲಿ ಮಾತ್ರವಲ್ಲ ಇನ್ನೂ ಹೆಚ್ಚಾಗಿ ವಿಸ್ತರಿಸಿ ಪ್ರಸಿದ್ಧಿಗೊಳಿಸಬೇಕಾಗಿದೆ. ನಾವು ನ್ಯಾಷನಲ್ ಅಸೆಂಬ್ಲಿಯಲ್ಲಿ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುತ್ತೇವೆ. ನಾವೆಲ್ಲರೂ ನಮ್ಮ ನಮ್ಮ ಸ್ಥಾನಗಳಲ್ಲಿ ನಿಶ್ಚಯವಾಗಿಯೂ ಅಹ್ಮದಿಯವರಿಂದ ಅನುಭವ ಪಡೆದವರಾಗಿದ್ದೇವೆ. ಇದೊಂದು ಅತ್ಯಂತ ಕ್ರಿಯಾಶೀಲ ಜಮಾಅತ್ ಆಗಿದೆ. ಅದು ಸಾಮಾಜಿಕ ದೃಷ್ಟಿಯಿಂದಲೂ ಅತ್ಯಂತ ಪರಿಣಾಮಕಾರಿಯಾಗಿದೆ.

ಅನಂತರ ರಾಜ್ಯಮಂತ್ರಿ ಹಾಗೂ ಉಪ ವಿದೇಶಾಂಗ ಮಂತ್ರಿ ಆಗಿದ್ದಂತಹ ಜನಾಬ್ Niels Annen ಸಾಹಿಬ್ ಅವರು ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು ಮೊಟ್ಟ ಮೊದಲು ಹುಝೂರರಿಗೆ ಮತ್ತೆ ಇತರ ಉಪಸ್ಥಿತರಿಗೆ ಸಲಾಂ ಹೇಳಿದರು ಮತ್ತು ಅಂದಿನ ಕಾರ್ಯಕ್ರಮದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಅವರು ಹೇಳಿದರು: 70 ವರ್ಷಗಳ ಹಿಂದೆ ಜರ್ಮನಿಯ ಪ್ರಾಥಮಿಕ ಕಾನೂನು ತಯಾರಾಯಿತು. ಅದರಲ್ಲಿ ಒಂದು ಪ್ರಾಥಮಿಕ ಹಕ್ಕು ಧಾರ್ಮಿಕ ಸ್ವಾತಂತ್ರ್ಯವಾಗಿದೆ. ಆ ಕಾರಣದಿಂದ ಈ ದೇಶದಲ್ಲಿ ವಿವಿಧ ಧರ್ಮಗಳ ಮತ್ತು ಸಂಸ್ಕೃತಿಗಳ ಜನರು ಶಾಂತಿ ಸೌಹಾರ್ದತೆಯಿಂದ ಒಟ್ಟಾಗಿ ವಾಸಿಸುತ್ತಾರೆ. ಅದೇ ವರ್ಷ ಜೂನ್ 1949 ರಲ್ಲಿ ಜರ್ಮನಿಯ Nordwestdeutsche Rundfunk ರೇಡಿಯೋ ಸ್ಟೇಶನ್‌ನಲ್ಲಿ ಅವರ ಒಂದು ಉಪನ್ಯಾಸ ಪ್ರಸಾರವಾಯಿತು. ಶೇಖ್ ನಸೀರ್ ಅಹ್ಮದ್ ಅವರು ಸ್ವಿಝರ್‌ಲ್ಯಾಂಡ್‌ನ ಅಹ್ಮದೀಯ ಮುಬಲ್ಲಿಗ್ ಆಗಿದ್ದರು. ಇದು ಜರ್ಮನಿಯಲ್ಲಿ ಮೊದಲ ಬಾರಿಗೆ ಇಸ್ಲಾಮ್ ಕುರಿತು ಮಾಡಿದ ಪ್ರಸಾರ ಕಾರ್ಯಕ್ರಮವಾಗಿತ್ತು. ಪ್ರಾರಂಭದಿಂದಲೇ ಅಹ್ಮದಿಯಾ ಜಮಾಅತ್ ಮತ್ತು ಜರ್ಮನಿಯ ಸಂವಿಧಾನಗಳ ನಡುವೆ ಒಂದು ಸಂಬಂಧ ಬೆಳೆದುಕೊಂಡು ಬಂದಿದೆ. 1955 ರಲ್ಲಿ ಅಹ್ಮದಿಯಾ ಜಮಾಅತ್ ಮೊದಲು ಹೆಂಬರ್ಗಿನಲ್ಲಿ ಸ್ಥಾಪನೆಗೊಂಡಿತು. ಅನಂತರ 1957 ರಲ್ಲಿ ಯುದ್ಧ ನಂತರದ ಮೊದಲ ಮಸೀದಿಯನ್ನು ನಿರ್ಮಿಸಲಾಯಿತು. ಅಂದರೆ ಫಝುತ್ತಿ ಉಮರ್ ಮಸೀದಿ – ಅದರೊಂದಿಗೆ ನನಗೆ ಆಳವಾದ ಸಂಬಂಧವಿದೆ. ನನ್ನ ಕ್ಷೇತ್ರವಾದ ಕಾರಣಕ್ಕೆ ಮಾತ್ರವಲ್ಲ ಬದಲಾಗಿ ನನಗೆ ಅಲ್ಲಿಯ ಸ್ಥಳೀಯ ಜಮಾಅತಿನೊಂದಿಗೆ ಆಪ್ತವಾದ ಮೈತ್ರಿಯಿದೆ.

ಜನಾಬ್ Niels Anmen ಸಾಹಿಬ್ ಹೇಳಿದರು. ಜಮಾಅತನ್ನು ಹೆಂಬರ್ಗಿನಲ್ಲಿ 2014 ರಿಂದ ಮತ್ತು Hessen ರಾಜ್ಯದಲ್ಲಿ 2013 ರಿಂದ Konperschaftdes offentischen rechts ಇದೆ. ಅಂದರೆ ಅದರ ಸ್ಥಾನಮಾನ (status) ಕ್ರೈಸ್ತರ ಚರ್ಚಿನ ಸಮಾನವಾಗಿದೆ. ಇದು ಸಾಮಾನ್ಯ ಮಾತಲ್ಲ. ಏಕೆಂದರೆ ಅಹ್ಮದಿಯಾ ಜಮಾಅತ್ ಜರ್ಮನಿಗೆ ವಿವಿಧ ರೀತಿಯಲ್ಲಿ ಪ್ರಯೋಜನಕಾರಿಯಾಗಿ ಸಾಬೀತಾಗಿದೆ. ಒಂದು ಗಮನಿಸಬೇಕಾದ ವಿಷಯವೇನೆಂದರೆ ಅಹ್ಮದೀಯರು ತಮ್ಮ ಮುರಬ್ಬಿಗಳನ್ನು ಇಲ್ಲೇ ತರಬೇತಿ ನೀಡುತ್ತಾರೆ. ಆದುದರಿಂದ ಅವರ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಜರ್ಮನಿ ದೇಶಕ್ಕೆ ಬರುವ ವರ್ಷಗಳಲ್ಲಿ ಸಂಯುಕ್ತ ರಾಷ್ಟ್ರದ (United Nations) ಮಾನವ ಹಕ್ಕುಗಳ ಸಮಿತಿ (Human Rights council) ನಲ್ಲಿ ಮತ್ತೊಮ್ಮೆ ಶಾಮೀಲಾಗುವ ಶ್ರೇಯ ದೊರೆಯಲಿದೆ. ಕೆಲವು ದಿನಗಳ ಹಿಂದೆಯೇ ಅದರ ಆಯ್ಕೆ ಪೂರ್ಣಗೊಂಡಿದೆ. ಕಳೆದ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಜರ್ಮನಿಗೆ ತುಂಬ ಗೌರವ ದೊರೆತಿತ್ತು ಮಾನವ ಹಕ್ಕುಗಳ (Human Rights) ಸಮಸ್ಯೆಗಳ ಕುರಿತು ನಮ್ಮೊಂದಿಗೆ ಕೇಳಲಾಗುತ್ತದೆ. ಆದುದರಿಂದ ನಾನು ಅಹ್ಮದೀಯ ಮುಸ್ಲಿಮ್ ಜಮಾಅತ್‌ಗೆ ಈ ಆಶ್ವಾಸನೆ ನೀಡುತ್ತೇನೆ – ನಾವು ಆ ವೇದಿಕೆಯ ಮೂಲಕ ನಿಶ್ಚಯವಾಗಿಯೂ ಧಾರ್ಮಿಕ ಸ್ವಾತಂತ್ರ್ಯದ ಕುರಿತು ಮಾತನಾಡುವೆವು. ವಿಶೇಷವಾಗಿ ಅಹ್ಮದಿಯಾ ಜಮಾಅತಿನ ಪ್ರಸ್ತಾಪ ಮಾಡುವೆವು. ನಿಶ್ಚಯವಾಗಿಯೂ ಎಲ್ಲ ಆತಂಕಗಳು ಪರಿಹರಿಸಲ್ಪಡದಿದ್ದರೂ ನಾವು ನಿಮ್ಮ ಪರವಾಗಿ ಅವಶ್ಯವಾಗಿ ನಿಲ್ಲುವೆವು ಎಂದರು.

**22 ಅಕ್ಟೋಬರ್ 2019 (ಮಂಗಳವಾರ)**

**ಸಂಸದರೊಡನೆ ಹುಝೂರ್ ಅನ್ವರ್(ಅಬಿಅ) ರವರ ಸಂಬೋಧನೆ**

ಹುಝೂರ್ ಸಂಜೆ 7 ಗಂಟೆ 40 ನಿಮಿಷಕ್ಕೆ ಉಪಸ್ಥಿತರನ್ನು ಆಂಗ್ಲ ಭಾಷೆಯಲ್ಲಿ ಸಂಬೋಧಿಸಿದರು. ಆ ಸಂಬೋಧನೆಯ ಉರ್ದು ಸಾರಾಂಶ ಪ್ರಸ್ತುತವಿದೆ. ಎಲ್ಲಾ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ಎಂದರೆ ಅವರ ಮೇಲೆ ಅಲ್ಲಾಹನ ಶಾಂತಿ ಹಾಗೂ ಅನುಗ್ರಹವಿರಲಿ ಎಂದು ಹಾರೈಸಿದರು.

ಪ್ರಪ್ರಥಮವಾಗಿ ತಮ್ಮೆಲ್ಲ ಗೌರವಾನ್ವಿತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅವರೆಲ್ಲರೂ ತಮ್ಮ ಆಮಂತ್ರಣವನ್ನು ಸ್ವೀಕರಿಸಿ ಸಭೆಗೆ ಆಗಮಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು. ಇತ್ತೀಚೆಗೆ ಲೋಕದಲ್ಲಿ ಸಾಮಾನ್ಯವಾಗಿ ಮತ್ತು ಪಾಶ್ಚಿಮಾತ್ಯ ಲೋಕದಲ್ಲಿ ವಿಶೇಷವಾಗಿ ವಲಸಿಗರ ಕುರಿತು, ಅವರಿಂದ ಸಮಾಜದ ಮೇಲೆ

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.